ಸಂಪುಟ 01 । ಸಂಚಿಕೆ 11 । ಬುಧವಾರ 26 ನವೆಂಬರ್ 2025 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ಸಂವಿಧಾನ ದಿನ (Constitution Day of India) / ರಾಷ್ಟ್ರೀಯ ಕಾನೂನು ದಿನ**

ವಿಶೇಷತೆ: 1949 ರಲ್ಲಿ ಇದೇ ದಿನದಂದು ಭಾರತದ ಸಂವಿಧಾನ ಸಭೆಯು ಭಾರತದ ಸಂವಿಧಾನವನ್ನು ಅಂಗೀಕರಿಸಿತು. ಈ ದಿನದ ಮಹತ್ವವನ್ನು ಸ್ಮರಿಸಲು ಮತ್ತು ಸಂವಿಧಾನದ ಮೌಲ್ಯಗಳ ಬಗ್ಗೆ ಜಾಗೃತಿ ಮೂಡಿಸಲು ಇದನ್ನು ಆಚರಿಸಲಾಗುತ್ತದೆ. ಈ ದಿನದಂದು ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಸ್ಮರಿಸಲಾಗುತ್ತದೆ.

**2) ರಾಷ್ಟ್ರೀಯ ಹಾಲು ದಿನ (National Milk Day)**

ವಿಶೇಷತೆ: ಭಾರತದಲ್ಲಿ 'ಶ್ವೇತ ಕ್ರಾಂತಿಯ ಪಿತಾಮಹ' ಎಂದೇ ಪ್ರಸಿದ್ಧರಾದ ಡಾ. ವರ್ಗೀಸ್ ಕುರಿಯನ್ ಅವರ ಜನ್ಮದಿನದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಹಾಲು ಮತ್ತು ಹೈನುಗಾರಿಕೆ ವಲಯದ ಮಹತ್ವ ಹಾಗೂ ಕೊಡುಗೆಯನ್ನು ಈ ದಿನ ಗುರುತಿಸಲಾಗುತ್ತದೆ.

**3) ವಿಶ್ವ ಆಲಿವ್ ಮರ ದಿನ (World Olive Tree Day)** ವಿಶೇಷತೆ: ಶಾಂತಿ, ಬುದ್ಧಿವಂತಿಕೆ ಮತ್ತು ಸಮೃದ್ಧಿಯ ಸಂಕೇತವಾಗಿರುವ ಆಲಿವ್ ಮರದ ಸಾಂಸ್ಕೃತಿಕ ಮತ್ತು ಆರ್ಥಿಕ ಮೌಲ್ಯವನ್ನು ಉತ್ತೇಜಿಸಲು ಗಓಇಖಅಔ ಈ ದಿನವನ್ನು ಆಚರಿಸುತ್ತದೆ.

## ಸುಭಾಷಿತ

'ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳವಳಿಗಳನ್ನು ಜೀವಂತವಾಗಿಟ್ಟಿರುವುದು ಅತ್ಯಗತ್ಯ'

ಕುವೆಂಪು

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸಿಎಂ ಬದಲಾವಣೆ ವಿಚಾರ ವರಿಷ್ಟರಿಗೆ ಬಿಟ್ಟಿದ್ದು :ಸಿದ್ದರಾಮಯ್ಯ

ಶಿಡ್ಲಘಟ್ಟ: ಎಂ ಬದಲಾವಣೆ ವಿಚಾರದಲ್ಲಿ ವರಿಷ್ಟರು ನೀವೇ ಮುಂದುವರೆಯಿರಿ ಅಂತ ಹೇಳಿದರೆ ನಾನೇ ಮುಂದುವರೆಯುತ್ತೇನೆ. ಯಾವುದಕ್ಕೂ ಪಕ್ಷದ ವರಿಷ್ಠರ ನಿರ್ಧಾರ ಅಂತಿಮ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಎಂ ಬದಲಾವಣೆ ವಿಚಾರದ ಬಗ್ಗೆ ಸ್ಪಷ್ಟನೆ ನೀಡಿದರು. ಪಟ್ಟಣದಲ್ಲಿ 2008 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗು ಶಂಕುಸ್ಥಾಪನೆ ಕಾರ್ಯಕ್ರಮಕ್ಕೂ ಮುನ್ನ ತಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು

ನಾಲ್ಕೈದು ತಿಂಗಳ ಹಿಂದೆಯೇ ಪಕ್ಷದ ವರಿಷ್ಟರು ಸಚಿವ ಸಂಪುಟವನ್ನು



ಪುನರ್ ರಚನೆ ಮಾಡಬೇಕೆಂದು ಹೇಳಿದ್ದರು. ಆದರೆ ನಾನೇ ಎರಡೂವರೆ ವರ್ಷ ಆದ ಮೇಲೆ ಮಾಡೋಣ ಅಂತ ಹೇಳಿದ್ದೆ. ಸಿಎಂ ಬದಲಾವಣೆ ವಿಚಾರದಲ್ಲಿ ಪಕ್ಷದ ವರಿಷ್ಠರು ಏನು ನಿರ್ಧಾರ ತೆಗೆದುಕೊಳ್ಳುತ್ತಾರೆ ಅದನ್ನು ನಾನು ಒಪ್ಪಬೇಕು. ಡಿ.ಕೆ.ಶಿವಕುಮಾರ್ ಸಹ ಒಪ್ಪಬೇಕೆಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಕೆಲವು ಶಾಸಕರು ಡಿ.ಕೆ.ಶಿವಕುಮಾರ್ ಅವರನ್ನು ಸಿಎಂ ಮಾಡಬೇಕೆಂದು ಹೇಳಿ ದೆಹಲಿ ಪ್ರವಾಸ ಕೈಗೊಂಡಿರುವ ಕುರಿತು ಕೇಳಿದ ಪ್ರಶ್ನೆಗೆ ಪತ್ರಿಕ್ರಿಯೆ ನೀಡಿದ ಸಿಎಂ, ಯಾರೇ ಏನೇ ಹೇಳಿದರೂ ಅಂತಿಮವಾಗಿ ಪಕ್ಷದ ವರಿಷ್ಟರು ನಿರ್ಧಾರಂತೆ

3ನೇ ಪುಟಕ್ಕೆ

# ಜೆಡಿಎಸ್ ಪಕ್ಷದಿಂದ ಬೃಹತ್ ಪ್ರತಿಭಟನೆ ಎತ್ತಿನ ಬಂಡಿಗಳ ಮೂಲಕ ಪ್ರತಿಭಟನೆ



**ನೈಜ್ಯ ದೇಸೆ ನ್ಯೂಸ್**

ಸಿಂಧನೂರು ನಗರದಲ್ಲಿ ಜೆಡಿ-ಎಸ್ ಪಕ್ಷದಿಂದ ಹಮ್ಮಿಕೊಳ್ಳಲಾಗಿದ್ದ ಕಾಂಗ್ರೆಸ್ ವಿರುದ್ಧದ ಬೃಹತ್ ಪ್ರತಿಭಟನೆ ಈ ಹೋರಾಟದಲ್ಲಿ ಅನೇಕ ಎತ್ತಿನ ಬಂಡಿ ಮೂಲಕ ಮೆರವಣಿಗೆ ನಡೆಯಿತು, ಭಾರಿ ಸಂಖ್ಯೆಯಲ್ಲಿ ಜನ ಸೇರಿದ್ದರು. ನಂತರ ಈ ಪ್ರತಿಭಟನೆಯಲ್ಲಿ ಮಾತನಾಡಿದ ನಿಖಿಲ್ ಕುಮಾರಸ್ವಾಮಿ ಅವರು ನೀರು ಕೊಡದಿದ್ದಲ್ಲಿ ಎಕರಿಗೆ 25 ಸಾವಿರ ಪರಿಹಾರ ಕೊಡಿ ಆಥವಾ ಈ ವರ್ಷದ ಸಾಲಮನ್ನ ಮಾಡಿ ತಮ್ಮದೆ ಪಕ್ಷದ ತೆಲಂಗಾಣದ ಸರ್ಕಾರ ಕನಿಷ್ಟ ಬೆಂಬಲ ಬೆಲೆಯಮೇಲೆ ಹೆಚ್ಚುವರಿಯಾಗಿ 500 ರೂಪಾಯಿ ನೀಡಿ ಭತ್ತ ಖರೀದಿ ಕೇಂದ್ರಗಳನ್ನು ತೆರೆದು ಭತ್ತ ಖರೀದಿಸಿ ಒಂದು ವಾರದಲ್ಲಿ ರೈತರ ಖಾತೆಗೆ ಹಣ ಜಮಾ ಮಾಡಿರುತ್ತಾರೆ ಅದರಂತೆ ನಮಗೂ ಬೆಂಬಲ ಬೆಲೆಯಮೇಲೆ ಹೆಚ್ಚುವರಿಯಾಗಿ 500 ರೂಪಾಯಿ ನೀಡಿ ಭತ್ತ ಕೂಡಲೆ ಖರೀದಿ ಮಾಡಲು ಒತ್ತಾಯಿಸುತ್ತೇವೆ. ನಮ್ಮ ಹಿಂದಿನ ಸರ್ಕಾರಗಳು 200 ರಿಂದ 300 ರೂಪಾಯಿ ಹೆಚ್ಚಿಸಿ ಖರೀದಿ ಮಾಡಿದ ಉದಾಹರಣೆಗಳಿವೆ.

ಈಗಾಗಲೆ ಬೆಳೆ ಹಾನಿಯಾದ ರೈತ-ರಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದ್ದು ಅದರೊಂದಿಗೆ ತಮ್ಮ ಸರ್ಕಾರ ಹಣ ನೀಡುವುದಾಗಿ ಹೇಳಿದ್ದು ಇದುವರಗೆ ಯಾವ ರೈತರ ಖಾತೆಗೆ ಹಣ ಬಂದಿರುವುದಲ್ಲ ಕೂಡಲೆ ಹಣ ಬಿಡುಗಡೆ ಮಾಡಲು ಒತ್ತಾಯಿಸುತ್ತೇವೆ. ಜೋಳ ಬೆಳದ ರೈತರಿಗೆ ತಮ್ಮ ಸರ್ಕಾರ ಕಳೆದ ವರ್ಷ ಜೋಳ ಕಟಾವಾದ 3-4 ತಿಂಗಳದ ನಂತರ ಖರೀಧಿ ಕೇಂದ್ರಗಳನ್ನು ತೆರೆದು ರೈತ-ರಿಗೆ ಕೊಡಬಾರದು ತೂಂದರೆ ಕೊಟ್ಟು ಕೆಲ ರೈತ-ರಿಂದ ಎಕರೆಗೆ 15 ಕ್ವಿಂಟಾಲ ಇನ್ನುಳಿದ ರೈತ-ರಿಂದ 10 ಕ್ವಿಂಟಾಲ ಖರೀದಿಮಾಡಿ ರೈತರಗೆ ಮೋಸಮಾಡಿದಿರಿ ಈ ಸಾರಿ ಜೋಳ ಕಟಾವು ಪ್ರಾರಂಭವಾಗುವ ಮೊದಲೇ ಖರೀದಿ ಕೇಂದ್ರಗಳನ್ನು ತೆರೆದು ಜೋಳ ಖರೀದಿಸಲು ಒತ್ತಾಯಿಸುತ್ತೇವೆ.

ಹಿಂದೆ ಸಮ್ಮಿಶ್ರ ಸರ್ಕಾರದಲ್ಲಿ ಶ್ರೀ ಕುಮಾರಸ್ವಾಮಿ ಮುಖ್ಯಮಂತ್ರಿ ಇದ್ದಾಗ ಎಕರೆಗೆ 20 ಕ್ವಿಂಟಾಲ್‌ನಂತೆ ಸಣ್ಣ ಮತ್ತು ದೊಡ್ಡರೈತರಿಗೆ ಎಲ್ಲಾ ಬೆಳೆದ ಜೋಳವನ್ನು ಖರೀದಿಸಿರುತ್ತಾರೆ ಆದ್ದರಿಂದ ಈ ವರ್ಷ ರೈತರು ಬೆಳೆದ ಎಲ್ಲಾ ಜೋಳವನ್ನು ಪ್ರತಿಎಕರೆಗೆ 20 ಕ್ವಿಂಟಾಲಿನಂತೆ ಖರೀದಿಸಲು ಒತ್ತಾಯಿಸುತ್ತೇವೆ. ಕೊಪ್ಪಳ ಜಿಲ್ಲೆ, ವಿಜಯನಗರ ಜಿಲ್ಲೆ ಹಾಗೂ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಯಲ್ಲಿ ಬೆಳೆದಿರುವ ಮೆಕ್ಕೆಜೋಳ ಹಾಗೂ ಹತ್ತಿಯ ಖರೀದಿ ಕೇಂದ್ರಗಳನ್ನು ಕೂಡಲೆ ತೆರೆದು ಖರೀದಿಸಬೇಕೆಂದು ಒತ್ತಾಯಿಸುತ್ತೇವೆ. ಈ ಪ್ರತಿಭಟನೆಯಲ್ಲಿ ನಿಖಿಲ್ ಕುಮಾರಸ್ವಾಮಿ, ಮಾಜಿ ಶಾಸಕರಾದ ವೆಂಕಟರಾವ್ ನಾಡಗೌಡ, ಮಾನವೀಯ ಮಾಜಿ ಶಾಸಕರಾದ ವೆಂಕಟಪ್ಪ ನಾಯಕ್, ಶಾಸಕ ಸುರೇಶ ಬಾಬು, ಮಾಜಿ ಶಾಸಕ ಬಾಲಕೃಷ್ಣ, ಮಾಜಿ ಸಚಿವ ಹನುಮಂತಪ್ಪ ಆಲ್ಕೋಡ್, ರಾಜ ವೆಂಕಟಪ್ಪ ನಾಯಕ್, ಸಿದ್ದು ಬಂಡಿ, ಸಿ.ವಿ ಚಂದ್ರಶೇಖರ, ಬಸವರಾಜ ನಾಡಗೌಡ ವೆಂಕಟೇಶ್ ಬಸವರಾಜ ನಾಡಗೌಡ ವೆಂಕಟೇಶ್ ನಂಜಲದಿನ್ನಿ, ನಾಗೇಶ ಹಂಚಿನಾಳ ಮತ್ತಿತರರು ಇದ್ದರು.

# ರೌಡಕುಂದ ವಲಯ ಮಟ್ಟದ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿದ್ಯಾರ್ಥಿಗಳ ಪ್ರತಿಭೆ ಕಾರಂಜಿ

**ನೈಜ್ಯ ದೇಸೆ ನ್ಯೂಸ್**

ರೌಡಕುಂದ: ಗ್ರಾಮದ ಉನ್ನತೀಕ-ರಿಸಿದ ಸರ್ಕಾರಿ ಪ್ರಾಥಮಿಕ ಶಾಲೆ ಸಿಂಗಾಪುರದಲ್ಲಿ 25-11-2025 ರಂದು ರೌಡಕುಂದ ವಲಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಥೋತ್ಸವ 2025-26 ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳ ಸಕ್ರಿಯ ಸಹಭಾಗಿತ್ವದಲ್ಲಿ ವಿವಿಧ ಕಲೆ ಸಂಸ್ಕೃತಿ , ಸಂಗೀತ ನೃತ್ಯ , ನಾಟಕ , ಚಿತ್ರಕಲೆ, ಕಥೆ , ಕವನ ವಾಚನ ಸೇರಿದಂತೆ ಹಲವಾರು ಸ್ಪರ್ಧೆಗಳು ನಡೆದವು , ರೌಡಕುಂದ ವಲಯ ಮಟ್ಟದ ವಿದ್ಯಾರ್ಥಿಗಳು ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ತಮ್ಮ



ಪ್ರತಿಭೆಯನ್ನು ಅನಾವರಣಗೊಳಿಸಿದರು. ಈ ಸಮಯದಲ್ಲಿ ಕಾರ್ಯಕ್ರಮದಲ್ಲಿ ವಿಜೇತರನ್ನು ಅಭಿನಂದಿಸಿ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಯಶಸ್ವಿ ಆಯೋಜನೆಗಾಗಿ ವಲಯ ಮಟ್ಟದ ರೌಡಕುಂದ ವಿಭಾಗ ಮಟ್ಟದ ಶಿಕ್ಷಕ ವೃಂದ ಮತ್ತು ಪೋಷಕರು ಉನ್ನತೀಕ-ರಿಸಿದ ಹಿರಿಯ ಪ್ರಾಥಮಿಕ ಶಾಲೆ ಸಿಂಗಾಪುರದ ಮುಖ್ಯ ಗುರುಗಳಿಗೆ, ಸಿಬ್ಬಂದಿ ವರ್ಗಕ್ಕೆ ಹಾಗೂ ಎಸ್ ಡಿ ಎಂ ಸಿ ಅಧ್ಯಕರು, ಸದಸ್ಯರು ,ಹಳೆಯ ವಿದ್ಯಾರ್ಥಿ ಬಳಗ ಗ್ರಾಮದ ಮುಖಂಡರುಗಳಿಗೆ ಅಭಿನಂದನೆ ಸಲ್ಲಿಸಿದರು.

# ಕೆ.ಕೆ.ಆರ್.ಡಿ.ಬಿ ಮ್ಯಾಕ್ರೋ ಅನುದಾನದಡಿ ನೂತನ ಜಿಟಿಟಿಸಿ ಸ್ಥಾಪಿಸುವ ಸಂಬಂಧಿಸಿದ ಸಭೆಯಲ್ಲಿ ಶಾಸಕ ಹಂಪನಗೌಡ ಬಾದರ್ಲಿ ಭಾಗಿ

**ನೈಜ್ಯ ದೇಸೆ ನ್ಯೂಸ್**

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಮಧುಗಿರಿ ಮತ್ತು ಇಂಡಿ ನಬಾರ್ಡ್ ಸಹಯೋಗದೊಂದಿಗೆ ಹಾಗೂ ಕಂಪ್ಲಿ, ರಾಯಚೂರು ಗ್ರಾಮೀಣ ಮತ್ತು ಸಿಂಧನೂರಿನಲ್ಲಿ ಕೆ.ಕೆ. ಆರ್.ಡಿ.ಬಿ ಮ್ಯಾಕ್ರೋ ಅನುದಾನದಡಿ ನೂತನ ಜಿಟಿಟಿಸಿ ಗಳನ್ನು ಸ್ಥಾಪಿಸುವ ಸಂಬಂಧಿಸಿದ ಸಭೆಯಲ್ಲಿ ಶಾಸಕರಾದ ಹಂಪನಗೌಡ ಬಾದರ್ಲಿ ಯವರು ಭಾಗವಹಿಸಿ ಸಮಾಲೋಚನೆ ನಡೆಸಿದರು.

ಈ ವೇಳೆ ಸಚಿವರಾದ ಡಾ॥ಶರಣಪ್ರಕಾಶ್ ಪಾಟೀಲ್,



ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



# ಘನತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ನೈರ್ಮಲ್ಯಕ್ಕೆ ಬಳಸಿದ ನೀರಿನ ನಿರ್ವಹಣೆ ಕುರಿತು ಜಾಗೃತಿ ಕಾರ್ಯಕ್ರಮ

**ನೈಜ್ಯ ದೇಸೆ ನ್ಯೂಸ್**

**ಮಸ್ಕಿ: ಘನತ್ಯಾಜ್ಯ ಮತ್ತು ಬಳಸಿದ ನೀರಿನ ನಿರ್ವಹಣೆಯನ್ನು ಯಶಸ್ವಿಗೊಳಿಸಲು ಸಮುದಾಯದ ಸಹಭಾಗಿತ್ವ ಅವಶ್ಯ-ಭಾಲಚಂದ್ರ ಜಾಬಶೆಟ್ಟಿ ಪರಿಸರ ಸ್ನೇಹಿ ತ್ಯಾಜ್ಯ ತಿರುವು ಯೋಜನೆಯ ಅಳವಡಿಕೆಯಿಂದ ನಗರ ತ್ಯಾಜ್ಯ ನಿರ್ವಹಣಾ ವೆಚ್ಚದಲ್ಲಿ ಗಣನೀಯ ಉಳಿತಾಯ ಸಾಧ್ಯ ಎಂದು ಪ್ರಧಾನ ಸಂಪನ್ಮೂಲ ವ್ಯಕ್ತಿ ಭಾಲಚಂದ್ರ ಜಾಬಶೆಟ್ಟಿ ಹೇಳಿಸರು.**

ಮಸ್ಕಿ ಪಟ್ಟಣದಲ್ಲಿ ಸ್ವಚ್ಛ ಭಾರತ ಮಿಷನ್ (ನಗರ) 2.0 ಅಂಗವಾಗಿ ಪೌರಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳಿಗಾಗಿ ಘನತ್ಯಾಜ್ಯ ವಸ್ತು ನಿರ್ವಹಣೆ ಹಾಗೂ ನೈರ್ಮಲ್ಯಕ್ಕೆ ಬಳಸಿದ ನೀರಿನ ನಿರ್ವಹಣೆ ಕುರಿತು ಜಾಗೃತಿ ಕಾರ್ಯಕ್ರಮವನ್ನು ರಾಯಚೂರು ಜಿಲ್ಲಾಡಳಿತ, ನಗರಾಭಿವೃದ್ಧಿ ಕೋಶ, ಪುರಸಭೆ ಮಸ್ಕಿ ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು ಮಸ್ಕಿ ಸಹಯೋಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ ಘನತ್ಯಾಜ್ಯ



ಮತ್ತು ಬಳಸಿದ ನೀರಿನ ನಿರ್ವಹಣೆಯನ್ನು ಯಶಸ್ವಿಗೊಳಿಸಲು ಸಮುದಾಯದ ಸಹಭಾಗಿ-ತ್ವ ಅತೀ ಅವಶ್ಯಕವಾಗಿದ್ದು ಸಮುದಾಯದ ಮನವೊಲಿಸಲು ಇಂಥ ಜಾಗೃತಿ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸುತ್ತವೆಯೆಂದು ಎಂದರು. ತ್ಯಾಜ್ಯ ಸೃಷ್ಟಿಸುವವರು ಹಾಗೂ ತ್ಯಾಜ್ಯವನ್ನು ಸಂಸ್ಕ-ರಿಸುವವರ ಮಧ್ಯೆ ಸಂಪರ್ಕವೇರ್ಪಡಿಸುವುದ-ರಿಂದ ಆರ್ಥಿಕಲಾಭಪಡೆಯಬಹುದಲ್ಲದೆ ತ್ಯಾಜ್ಯದಿಂದಾಗಿ ಉಂಟಾಗುವ ಗಂಡಾಂತರಗಳನ್ನು ತಪ್ಪಿಸಬಹುದಾಗಿದೆಯೆಂದರು.

ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸುವುದರ ಜೊತೆಗೆ ವೇಸ್ಟ್ ಡೈವರ್ಷನ್ ಪ್ಲಾನ್ ಅಳವಡಿಕೆಯಿಂದ ತ್ಯಾಜ್ಯ ಸಾಗಣೆ ವೆಚ್ಚದಲ್ಲಿ ಕಡಿತಗೊಳಿಸಬಹುದು ಹಾಗೂ ತ್ಯಾಜ್ಯದಲ್ಲಿರುವ ಸಂಪನ್ಮೂಲಗಳ ಕ್ರೋಢಿಕರಣದಿಂದ, ಜೈವಿಕ ಗೊಬ್ಬರ ತಯಾ-ರಿಕೆಯಿಂದ ಆರ್ಥಿಕ ಲಾಭ ಪಡೆಯಬಹುದು, ತಾರಸಿ ತೋಟದಲ್ಲಿ ಸಾವಯವ ತರಕಾರಿ ಬೆಳೆಸಿ ಆರೋಗ್ಯ ವೃದ್ಧಿ ಪಡೆಯಬಹುದಾಗಿದೆ ಯೆಂದು ತಿಳಿಸಿದರು. ಪರಿಸರ ಸ್ನೇಹಿ ಸೂಕ್ಷ್ಮಾಣು ಬಳಕೆಯಿಂದ ಘನತ್ಯಾಜ್ಯ ಮತ್ತು ಬಳಸಿದ ನೀರಿನ ನಿರ್ವಹಣೆ ಕುರಿತ ವಿಧಾನಗಳನ್ನು ವಿಷದವಾಗಿ ವಿವರಿಸಿದರು. ಬಚ್ಚಲು ನೀರು ಮತ್ತು ಶೌಚದ ನೀರನ್ನು ಸೂಕ್ತವಾಗಿ ನಿರ್ವಹಣೆ ಮಾಡದಿದ್ದಲ್ಲಿ ಅನುಭವಿಸಬೇಕಾದ ಗಂಭೀರ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಿದರು. ಆಸುಪಾಸಿನಲ್ಲಿ ಮಲಿನ ನೀರು ಶೇಖರಗೊಳ್ಳದಂತೆ ನೋಡಿಕೊಂಡಲ್ಲಿ ಆರೋಗ್ಯ ಸುರಕ್ಷತೆ ಸಾಧ್ಯವಾಗುತ್ತದೆ.

ವಿಕೇಂದ್ರಕೃತ ತ್ಯಾಜ್ಯ ನೀರು ನಿರ್ವಹಣೆ ಯಲ್ಲಿ ಪೋಷಕಾಂಶಗಳನ್ನು ಹೀರಿಕೊಳ್ಳುವ ಸಾಮರ್ಥ್ಯ ಹೊಂದಿರುವ ಸಸಿಗಳನ್ನು ಉಪಯೋಗಿಸುವ ಪ್ರವೃತ್ತಿ ಇಮ್ಮಡಿಗೊಳ್ಳತ್ತಿದೆ. ಪ್ಲಾಂಟೆಡ್ ಫಿಲ್ಟರ್ ಮತ್ತು ಪ್ಲಾಂಟೆಡ್ ವೆಟ್ಲ್ಯಾಂಡ್ ಮುಂತಾದ ಪರಿಸರ ಪೂರಕ ತಂತ್ರಗಳಿಂದ ತ್ಯಾಜ್ಯ ನೀರನ್ನು ಸಂಸ್ಕರಿಸಿ, ಶುದ್ಧೀಕರಿಸಿ ಕೃಷಿಯಲ್ಲಿ ಆಹಾರೇತರ ಬೆಳೆಗಳಿಗೆ ಉಪಯೋಗಿಸಿ ಆರ್ಥಿಕ ಅಭಿವೃದ್ಧಿಗೆ ನಾಂದಿ ಹಾಡಬಹುದಾಗಿದೆ. ಈ ಸಂದರ್ಭದಲ್ಲಿ ತ್ಯಾಜ್ಯ ನೀರು ಸಂಸ್ಕರಣ ಸಸ್ಯಗಳ ಪ್ರಾತ್ಯಕ್ಷಿತೆಯಲ್ಲಿ ಅವುಗಳನ್ನು ಬಳಸುವ ಬೆಳೆಸುವ ವಿಧಾನಗಳನ್ನು ವಿವರಿಸಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಕಾಲೇಜಿನ ಪ್ರಾಚಾರ್ಯ ರಂಗಯ್ಯಶೆಟ್ಟಿ ,ಭಾಲಚಂದ್ರ ಜಾಬಶೆಟ್ಟಿ, ಪುರಸಭೆ ಉಪಾಧ್ಯಕ್ಷೆ ಶ್ರೀಮತಿ ಗೀತಮ್ಮ ಶಿವರಾಜ ಬುಕ್ಕಣ್ಣ,ನಾಗರಾಜ ಸಿ ಇ ಒ, ಉಪನ್ಯಾಸಕರಾದ ಮಾಂತೇಶ್ ಮಸ್ಕಿ, ರಂಗಯ್ಯ, ಸುಜಾತ ಕಿರಿಯ ಆರೋಗ್ಯ ನಿರೀಕ್ಷಕರು ಸೇರಿದಂತೆ ಇನ್ನಿತರರು ಇದ್ದರು.

## ಸಾಹಿತ್ಯ ಸಿಂಚನ

ನನ್ನ ಕುಟುಂಬ?

ನನ್ನ ಬದುಕಿನ ಮೊದಲ ಮನೆ ಪ್ರೀತಿಯ ಮೊದಲ
ಭಾಷೆ ಬಲವಾಗಿ ನಿಲ್ಲುವ ಮೊದಲ ಬೆಂಬಲ ನನ್ನ
ಕುಟುಂಬದವರು

ಹೊಸೆಯಿಂದ ಹಿಡಿದು ಕನಸಿನವರೆಗೂ
ನನ್ನೊಂದಿಗಿರುವ ಪ್ರತಿಯೊಬ್ಬರೂ ಪರ್ವತದಂತೆ
ರಕ್ಷಣೆ ನೀಡುವವರು ಆಕಾಶದಂತೆ ಆಶೀರ್ವಾದ
ಸುರಿಸುವವರು ನನ್ನ ಕುಟುಂಬದವರು

ಸಂಕಟ ಬಂದ್ರೆ ತಲೆಹತ್ತಿ ನಿಲ್ಲುವವರು ಸಂತೋಷ
ಬಂದರೆ ಹೃದಯದಿಂದ ನಗುವವರು.ನನ್ನ ನಗುಗೆ
ಕಾರಣವೂ ಅವರೇ ನನ್ನ ಕುಟುಂಬದವರು

ನನ್ನ ಜೀವನದ ದಾರಿಗೆ ಬೆಳಕು ತರುವ ಅಪರೂಪದ
ದೀಪ ನನ್ನ ಕುಟುಂಬ.

ಆಶುಪಾಷಾ ಉಪನ್ಯಾಸಕರು
ಸನ್ ರೈಸ್ ಪ್ಯಾರಾಮೆಡಿಕಲ್ ಕಾಲೇಜ್

# ಅತಿಥಿ ಉಪನ್ಯಾಸಕರ ಉಗ್ರಪ್ರತಿಭಟನೆಗೆ ಗದಗ ಗಡಗಡ

❑ ನೈಜ್ಯ ದೆಸೆ ನ್ಯೂಸ್

**ಗದಗ: ನ 25:–ಮಂಗಳವಾರ ಗದಗ ನ ಜಿಲ್ಲಾಡಳಿತ ಭವನದ ಮುಂದೆ ಕರ್ನಾಟಕ ಸರಕಾರಿ ಪ್ರಥಮದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ವತಿಯಿಂದ ಸೇವಾ ಭದ್ರತೆಗಾಗಿ ಆಗ್ರಹಿಸಿ ಸಾವಿರಾರು ಅತಿಥಿ ಉಪನ್ಯಾಸಕರು ಅನಿರ್ದಿಷ್ಟಾವಧಿ ಪ್ರತಿಭಟನೆಗಿಳಿದಿದ್ದಾರೆ.**





ಪ್ರತಿಭಟನಾ ಸ್ಥಳಕ್ಕೆ ಗದಗಿನ ತೋಂಟದಾರ್ಯ ಮಠದ ಶ್ರೀಗಳಾದ ಡಾಕ್ಟರ್ ಸಿದ್ದಲಿಂಗ ಮಹಾಸ್ವಾಮಿಗಳು ಮತ್ತು ಶಾಸಕ ಸಂಕನೂರು ಆಗಮಿಸಿ ಅತಿಥಿ ಉಪನ್ಯಾಸಕರ ನ್ಯಾಯಸಮ್ಮತ ಬೇಡಿಕೆಗಳನ್ನು ಸರಕಾರ ಶೀಘ್ರ ಈಡೇ–ರಿಸಬೇಕು ಈ ಪ್ರತಿಭಟನೆಗೆ ಮಠಾಧೀಶರೆಲ್ಲರ ಬೆಂಬಲವಿದೆ ಎಂದು ಅಭಯಹಸ್ತ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಡಾಕ್ಟರ್ ಕಲ್ಮನಿ ಉನ್ನತಶಿಕ್ಷಣ ಇಲಾಖೆಯ ದ್ವಂದ್ವ ನೀತಿ ಈ ಗೊಂದಲಕ್ಕೆಲ್ಲ ಕಾರಣವಾಗಿದೆ.

ಯು,ಜಿ,ಸಿ,ನಾನ್,ಯು,ಜಿ,ಸಿ,– ಎಂಬ ಭೇದಭಾವ ಮಾಡದೆ ಎಲ್ಲ ಅತಿಥಿ ಉಪನ್ಯಾಸಕರನ್ನೂ ಈ ಮೊದಲಿನಂತೆ ಮುಂದುವರೆಸಿ ಉದ್ಯೋಗ ಭದ್ರತೆ ನೀಡಿ ಸಾವಿರಾರು ಅತಿಥಿ ಉಪನ್ಯಾಸಕರ ಕುಟುಂಬಗಳು ಬೀದಿಗೆ ಬರುವುದನ್ನು ತಡೆಯಬೇಕು. ಇಲ್ಲವಾದರೆ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲೂ ಉಗ್ರ ಹೋರಾಟ ಮಾಡಬೇಕಾಗುತ್ತದೆಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಮನನೊಂದ ಅತಿಥಿ ಉಪನ್ಯಾಸಕ ಪೆಟ್ರೋಲ್ ಸುರಿದು ಕೊಂಡು ಆತ್ಮಹತ್ಯ ಮಾಡಿಕೊಳ್ಳಲು ಯತ್ನಿಸಿದರು, ಆಗ ಅಧ್ಯಕ್ಷರು,ಉಪನ್ಯಾಸಕರು,ಪೊಲೀಸರು ಆಗಮಿಸಿ ಆಗಬಹುದಾಗಿದ್ದ ಅನಾಹುತವನ್ನು ತಡೆದರು.

ಸರಕಾರದ ಈ ನೀತಿ ಮುಂದುವರೆದರೆ ಅತಿಥಿ ಉಪನ್ಯಾಸಕರ ಸರಣಿ ಆತ್ಮಹತ್ಯಯೇ ನಡೆಯುತ್ತದೆ. ಎರಡು ದಶಕಗಳ ಕಾಲ ದುಡಿಸಿಕೊಂಡು ಈಗ ಏಕಾಏಕಿ ಬೀದಿಗೆ ಬಿಟ್ಟರೆ ಅವರನ್ನೇ ನಂಬಿದ ಕುಟುಂಬದ ಗತಿಯೇನೆಂದು ಉಪನ್ಯಾಸಕರು ಪ್ರಶ್ನಿಸಿದರು. ಮಹಿಳಾ ಉಪನ್ಯಾಸಕಿಯರೂ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ನಿರ್ದಯಿ ಸರಕಾರದ ಅಮಾನವೀಯ ನಿರ್ಧಾರವನ್ನು ಕಟುವಾಗಿ ಟೀಕಿಸಿದರು. ಸಂದರ್ಶನ ನಿಲ್ಲಿಸಿ ನಮಗೆ ನ್ಯಾಯ ಕೊಡುವ ತನಕ ಪ್ರತಿಭಟನೆ ನಿರಂತರವಾಗಿ ನಡೆಯುತ್ತದೆಂದು ಹೇಳಿದರು.

## ಸನ್‌ರೈಸ್ ಕಾಲೇಜಿನಲ್ಲಿ ವಿಶ್ವ ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸನ್‌ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರ ಮೆಡಿಕಲ್ ಕಾಲೇಜಿನ ವತಿಯಿಂದ ವಿಶ್ವ ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆ ಜಾಗೃತಿ ಕಾರ್ಯಕ್ರಮವನ್ನು ಭವ್ಯವಾಗಿ ಆಯೋಜಿಸಲಾಯಿತು. ಮಹಿಳಾ ಸಿಬ್ಬಂದಿಗಳಿಂದ ಪಾರಂಪರಿಕವಾಗಿ ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಉದ್ಘಾಟನೆ ನೆರವೇರಿಸಲಾಯಿತು.**

ಬೆಳಗಿದ ದೀಪವು ಮಹಿಳಾ ಸುರಕ್ಷತೆ, ಗೌರವ



ಮತ್ತು ಜಾಗೃತಿ ಎಂಬ ಸಂದೇಶವನ್ನು ಪ್ರತಿಬಿಂಬಿಸಿತು. ಕಾರ್ಯಕ್ರಮದ ನಿರೂಪಣೆಯನ್ನು ಉಪನ್ಯಾಸಕರಾದ ವೀರೇಶ್ ಅವರು ನಿಖರವಾಗಿ ಹಾಗೂ ಸಂವೇದನಾಶೀಲವಾಗಿ ನಡೆಸಿದರು. ಸಭೆಗೆ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ ಅತ್ತಾರ್ ವಹಿಸಿ ಮಾತನಾಡಿ ಮಹಿಳೆಯರ ವಿರುದ್ಧ ನಡೆಯುವ ದೌರ್ಜನ್ಯ ಯಾವುದೇ ಸಮಾಜದ ನೈತಿಕ ಮೌಲ್ಯಗಳಿಗೆ ವಿರುದ್ಧ. ಮಹಿಳೆ ಸಮಾಜದ ಶಕ್ತಿ, ಕುಟುಂಬದ ಆರಾಧ್ಯ, ರಾಷ್ಟ್ರದ ಮಾರ್ಗದರ್ಶಕಳು. ಅವರನ್ನು ಗೌರವಿಸುವುದು ಮತ್ತು ಅವರೊಂದಿಗೆ ಮಾನವೀಯತೆಯಿಂದ ವರ್ತಿಸುವುದು ನಮ್ಮೆಲ್ಲರ ನೈತಿಕ ಕರ್ತವ್ಯ. ಸಮಾಜದಲ್ಲಿ ಮಹಿಳೆಯರು ಧೈರ್ಯವಾಗಿ ಬದುಕಲು, ಸುರಕ್ಷಿತ ವಾತಾವರಣ ನಿರ್ಮಾಣ ಮಾಡುವುದು ಜನತೆಗೆ ಒಟ್ಟಾರೆ ಜವಾಬ್ದಾರಿ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಹಾಜರಾಗಿದ್ದ ಲಾಜರ್ ಸಿರಿಲ್ ಜಿ, ಪ್ರಾಚಾರ್ಯರು ಸನ್‌ರೈಸ್ ಸ್ಕೂಲ್ ಆಫ್ ನರ್ಸಿಂಗ್, ತಮ್ಮ ವಿಶೇಷ ಉಪನ್ಯಾಸದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯದ ದೈಹಿಕ, ಮಾನಸಿಕ, ಸಮಾಜಶಾಸ್ತ್ರೀಯ ಹಾಗೂ ತಾಂತ್ರಿಕ ಆಯಾಮಗಳನ್ನು ಮನದಟ್ಟುಗೊಳಿಸಿದರು. ದೌರ್ಜನ್ಯ ಎಂದರೆ ಕೇವಲ ಹೊಡೆದಾಟವಲ್ಲ; ಭಾವನಾತ್ಮಕ ಹಿಂಸೆ, ಆರ್ಥಿಕ ನಿರ್ಬಂಧ, ತಿರಸ್ಕಾರ, ಬೆದರಿಕೆ, ಸೈಬರ್ ದೌರ್ಜನ್ಯ ಇನ್ನಷ್ಟು ವಿವರವಾಗಿ ಅವರು, ಸೈಬರ್ ವಂಚನೆಗಳ ಪ್ರಕಾರಗಳು, ಮಾರ್ಫಿಂಗ್, ಫೇಕ್ ಐಡಿ, ಟ್ರೋಲಿಂಗ್, ಹ್ಯಾಕಿಂಗ್ ಅಪಾಯಗಳು ಸಾಮಾಜಿಕ ಜಾಲತಾಣಗಳ ಜವಾಬ್ದಾರಿ ಪೂರ್ಣ ಬಳಕೆ ಮಹಿಳೆಯರು ಮತ್ತು ಯುವತಿಯರು ಪಾಲಿಸಬೇಕಾದ ಆನ್‌ಲೈನ್ ಸುರಕ್ಷತಾ ಕ್ರಮಗಳು ಕುಟುಂಬ ಮತ್ತು ಸಮಾಜ ನೀಡಬೇಕಾದ ಮಾನಸಿಕ ಬಲ ಇತ್ಯಾದಿ ಪ್ರಮುಖ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿದರು,ಅದರೊಂದಿಗೆ, ಮಹಿಳೆಗಳಿಗಾಗಿ ಕಾನೂನು ರಕ್ಷಣೆಗಳನ್ನು ? POSH Act, POCSO, IPC 354, 509, ಮತ್ತು ಸೈಬರ್ ಕ್ರೈಮ್ ಸೆಲ್‌ಗಳ ಪಾತ್ರಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಮಹಿಳಾ ಸಿಬ್ಬಂದಿಗಳು, ಉಪನ್ಯಾಸಕರು, ವಿದ್ಯಾರ್ಥಿಗಳು ಹಾಗೂ ಸಂಸ್ಥೆಯ ಗಣ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಶಿಡ್ಲಘಟ್ಟ ಚಿಂತಾಮಣಿಗೆ ಜಲಗ್ಯಾರಂಟಿ ಸಚೀವ NSB

❑ ನೈಜ್ಯ ದೆಸೆ ನ್ಯೂಸ್

**ಹೆಚ್. ಎನ್ ವ್ಯಾಲಿ ಯೋಜನೆಯ ದ್ವಿತೀಯ ಹಂತದಲ್ಲಿ ಬೆಂಗಳೂರಿನ ನಗರದ ಸಂಸ್ಕ–ರಿಸಿದ ತ್ಯಾಜ್ಯ ನೀರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಅಮಾನಿ ಕೆರೆಯಿಂದ ಏತ ನೀರಾವರಿ ಮೂಲಕ ತಾಲೂಕಿನ 45 ಕೆರೆಗಳಿಗೆ ಮತ್ತು ಚಿಂತಾಮಣಿ ತಾಲೂಕಿನ 119 ಕೆರೆಗಳಿಗೆ ಹ–ರಿಸುವ ಹೆಚ್.ಎನ್ ವ್ಯಾಲಿ 3ನೇ ಹಂತದ ಯೋಜನೆಯ ಶಂಕುಸ್ಥಾಪನೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು, ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಸಂಪುಟ ಸಹೋದ್ಯೋಗಿಗಳೊಂದಿಗೆ ಇಂದು ಶಿಡ್ಲಘಟ್ಟದ ಹನುಮಂತಪುರದಲ್ಲಿ ನೆರವೇರಿಸಲಾಯಿತು.**



ಈ ಸಂದರ್ಭದಲ್ಲಿ, ಶಿಡ್ಲಘಟ್ಟದ ಹೈಟೆಕ್ ರೇಷ್ಮೆ ಮಾರುಕಟ್ಟೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ನಮ್ಮ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವಿವಿಧ ಕಾಮಗಾ–ರಿಗಳನ್ನೂ ಲೋಕಾರ್ಪಣೆ ಗೊಳಿಸಲಾಯಿತು.

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ರೈತರ ಪರಿಶ್ರಮ ಎಷ್ಟು ಕೊಂಡಾಡಿದರು ಸಾಲದು. 1,500 ಅಡಿ ಆಳದಿಂದ ನೀರನ್ನು ತೆಗೆದು, ರೇಷ್ಮೆ, ಹೂವು, ತರಕಾರಿ ಬೆಳೆದು, ಇಡೀ ರಾಜ್ಯಕ್ಕೆ ಹಂಚುತ್ತಿದ್ದಾರೆ. ಹಾಗಾಗಿ, ಇಲ್ಲಿನ ಜನರಿಗೆ ಪ್ರತಿ ಹನಿ ನೀರಿನ ಮೌಲ್ಯ ತಿಳಿದಿದೆ. ಇವರ ಬವಣೆ ನೀಗಿಸಲೆಂದೇ ಇಂದು, ಚಿಕ್ಕಬಳ್ಳಾಪುರ ಜಿಲ್ಲೆಯ ಮಳೆಯನ್ನೇ ನಂಬಿಕೊಂಡಿರುವ ಶಿಡ್ಲಘಟ್ಟ, ಚಿಂತಾಮಣಿ ತಾಲೂಕುಗಳ ಒಟ್ಟು164 ಕೆರೆಗಳಿಗೆ ಬೆಂಗಳೂರಿನ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಹರಿಸುವ ಯೋಜನೆಗೆ ಚಾಲನೆ ನೀಡಲಾಗಿದೆ.

ಈಗಾಗಲೇ, ಚಿಕ್ಕಬಳ್ಳಾಪುರ ಹಾಗೂ ಗೌರಿಬಿದನೂರು ತಾಲೂಕಿನ 34 ಕೆರೆಗಳಿಗೆ ನೀರನ್ನು ಹರಿಸುವ ಮಹೋನ್ನತ ಉದ್ದೇಶದಿಂದ 650 ಕೋಟಿ ರೂ. ವೆಚ್ಚದಲ್ಲಿ ವೃಷಭಾವತಿ ಯೋಜನೆಯ 2ನೇ ಹಂತವನ್ನು ಜಾರಿಗೊಳಿಸಲು ನಮ್ಮ ಕಾಂಗ್ರೆಸ್ ಸರ್ಕಾರ ಅನುಮೋದನೆ ನೀಡಿ ಅಂತರ್ಜಲ ಸಂರಕ್ಷಣೆಗೆ ಹೊಸ ಭಾಷ್ಯ ಬರೆದಿದೆ.

ನಮ್ಮ ಸರ್ಕಾರವು ಮಹತ್ವಾಕಾಂಕ್ಷೆಯ ಈ ಪರಿಸರ ಸ್ನೇಹಿ, ತ್ರಿವಳಿ ವ್ಯಾಲಿ ಜಲಯೋಜನೆಗಳ ಮೂಲಕ ಚಿಕ್ಕಬಳ್ಳಾಪುರ ಜಿಲ್ಲೆಗೆ ಅಂಟಿಕೊಂಡಿರುವ 'ಬರದನಾಡು' ಎನ್ನುವ ಹಣೆ ಪಟ್ಟಿಯನ್ನು ತೊರೆದು ಹಾಕಲು ದಿಟ್ಟ ಹೆಜ್ಜೆ ಇಟ್ಟಿದೆ. ಸಮಾರಂಭದಲ್ಲಿ, ನನ್ನೆಲ್ಲಾ ಸಂಪುಟ ಸಹೋದ್ಯೋಗಿ ಸಚಿವರು, ಲೋಕಸಭೆ ಸದಸ್ಯರು, ಶಾಸಕರು, ಸ್ಥಳೀಯ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಅಧಿಕಾರಿಗಳು ಉಪಸ್ಥಿತರಿದ್ದರು.

# ಮುಖ್ಯಮಂತ್ರಿಗಳು ಏಮ್ಸ್ ಗಾಗಿ ಮಾನ್ಯ ಪ್ರಧಾನಮಂತ್ರಿಯವರನ್ನು ಭೇಟಿಯಾಗಿದ್ದಾರೆ :ರವಿ ಭೂಸರಾಜ್

❑ ನೈಜ್ಯ ದೆಸೆ ನ್ಯೂಸ್

**ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಪ್ರಧಾನಿ ಶ್ರೀ ನರೇಂದ್ರ ಮೋದಿಜಿ ಅವರನ್ನು ಭೇಟಿಯಾಗಿ ಕಲ್ಯಾಣ ಕರ್ನಾಟಕದ ಜನರ ಆರೋಗ್ಯ ಸಂರಕ್ಷಣೆಗಾಗಿ ರಾಯಚೂರಿಗೆ ಏಮ್ಸ್ ಮಂಜೂರಾತಿ ನೀಡುವಂತೆ ಹಲವಾರು ಮನವಿಗಳನ್ನು ಸಲ್ಲಿಸಿದರೂ ಕೇಂದ್ರ ಸರ್ಕಾರ ತಾರಮ್ಯ ಧೋರಣೆ ಬಗ್ಗೆ ಗಮನ ಸೆಳೆದಿದ್ದಾರೆ.**

ರಾಯಚೂರು ಜನರು 1,000 ದಿನಗಳ ಕಾಲ ಹೋರಾಟ ನಡೆಸಿದರೂ ಕಿಮ್ಮತ್ತು ನೀಡದ ಕೇಂದ್ರ ಸರ್ಕಾರವು ಕಿಮ್ಮತ್ತು ನೀಡಲಿಲ್ಲ. ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾದಿಯಾಗಿ ಮನವಿಗಳನ್ನು



ಸಲ್ಲಿಸಿದರೂ ಕಿಮ್ಮತ್ತು ನೀಡಲಿಲ್ಲ. ನಮ್ಮ ರಾಜ್ಯ ಸರ್ಕಾರ ಕೇಂದ್ರದ ಆರೋಗ್ಯ, ಕುಟುಂಬ ಕಲ್ಯಾಣ ಸಚಿವಾಲಯಕ್ಕೆ ಯೋಜನಾ ವರದಿ ಸಲ್ಲಿಸಿದೆ. ಏಮ್ಸ್ ಗೆ ಅಗತ್ಯವಿರುವ ಭೂಮಿ, ಸಂಪರ್ಕ ವ್ಯವಸ್ಥೆ ಮಾಡಲು ಮುಂದಾಗಿದೆ. ಇಷ್ಟಾದರೂ ಕೇಂದ್ರದ ಬಿಜೆಪಿ ಸರ್ಕಾರ ಬಡವರು, ಹಿಂದುಳಿದ ಸಮುದಾಯಗಳನ್ನೇ ಹೆಚ್ಚಾಗಿ ಹೊಂದಿರುವ ರಾಯಚೂರನ್ನು ಹೊರತಾಗಿಸಿ, ಇತರೆ 22 ರಾಜ್ಯಗಳಿಗೆ ಏಮ್ಸ್ ಮಂಜೂರು ಮಾಡುವ ಮೂಲಕ ತನ್ನ ಮಲತಾಯಿ ಧೋರಣೆ ಮುಂದುವರಿಸಿದೆ.

ರಾಜ್ಯವನ್ನು ಪ್ರತಿನಿಧಿಸುವ ಬಿಜೆಪಿ ಕರ್ನಾಟಕ ಕೇಂದ್ರ ಸಚಿವರು ಈ ಬಗ್ಗೆ ಕೇಂದ್ರ ಸರ್ಕಾರವನ್ನು ಪ್ರಶ್ನೆ ಮಾಡದೆ ಅಧಿಕಾರ ಲಾಲಸೆಗಾಗಿ ಮುಗುಮ್ಮಾಗಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಕೇಂದ್ರ ತಾರತ್ಯಮದ ವಿರುದ್ಧ ದನಿ ಎತ್ತಿದ್ದಾರೆ. ಕಲ್ಯಾಣ ಕರ್ನಾಟಕ ಜನರ ಹಿತಬಯಸುವುರಾದರೆ ಬಿಜೆಪಿ ನಾಯಕರು ಬಾಯಿ ಮುಚ್ಚಿಕೊಂಡಿರುವುದೇಕೆ ಕೇಂದ್ರದ ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ನವೀಕರಿಸಬಹುದಾದ ಇಂಧನ ಖಾತೆ ಸಚಿವರಾದ ಶ್ರೀ ಪ್ರಾಲ್ಹದ್ ಜೋಶಿ ಅವರೇ, ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವರಾದ ಹೆಚ್ ಡಿ ಕುಮಾರಸ್ವಾಮಿ ಅವರೇ ಈವಿಚಾರವಾಗಿ ತಾವು ಮೌನಮುರಿದು ಮಾತನಾಡುತ್ತಿಲ್ಲ ಏಕೆ ನಿಮಗೆ ಕಲ್ಯಾಣ ಕರ್ನಾಟಕ ಜನರ ಹಿತ ಮುಖ್ಯವಲ್ಲವೇ.

## ನ.27 ರಂದು ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಹುಟ್ಟು ಹಬ್ಬದ ಅಂಗವಾಗಿ ರಕ್ತದಾನ ಶಿಬಿರ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕಲ್ಮಠ ಶ್ರೀ ಮುಕ್ತಾಗುಚ್ಛ ಬೃಹನ್ಮಠದ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ ಹುಟ್ಟು ಹಬ್ಬದ ಅಂಗವಾಗಿ ನ.27 ರಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ರಕ್ತದಾನ ಶಿಬಿರವನ್ನು ಶ್ರೀ ಮಠದ ಭಕ್ತರು ಹಾಗೂ ಹೆಚ್.ಡಿ.ಎಫ್.ಸಿ. ಬ್ಯಾಂಕ್ ಮಾನ್ವಿ ಶಾಖೆ,ರಿಮ್ಸ್ ರಕ್ತಭಂಡರ,**

ತಾಲೂಕು ಸಾರ್ವಜನಿಕ ಆಸ್ಪತ್ರೆ ಮಾನ್ವಿ ಮತ್ತು ಎನ್,ಎಸ್.ಎಸ್. ಘಟಕ ಸಹಯೋಗದಲ್ಲಿ ಪಟ್ಟಣದ ಕೆ.ಪಿ. ಎಸ್.ವಿ.ಎಸ್.ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದ್ದು ಸಾರ್ವಜನಿಕರು ಹಾಗೂ ಶ್ರೀ ಮಠದ ಭಕ್ತರು ರಕ್ತದಾನ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೆ.ಪಿ.ಎಸ್.ವಿ.ಎಸ್.ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಜೀವನೇಶ್ವರಯ್ಯ ಪ್ರಕಟಣೆಯಲ್ಲಿ ಕೋರಿದ್ದಾರೆ.

# ರಾಜ್ಯ ಮಟ್ಟದ ಕಾಯಕ ರತ್ನ ಪ್ರಶಸ್ತಿಗೆ ಮುದುಕಪ್ಪ ನಾಯಕ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ರಾಜ್ಯ ಮಟ್ಟದ ಕಾಯಕ ರತ್ನ ಪ್ರಶಸ್ತಿಗೆ ಸಮಾಜ ಸೇವೆ ಕ್ಷೇತ್ರ ಮತ್ತು ಆರೋಗ್ಯ ರಕ್ಷಣೆ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡಿದ ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಗ್ರಾಮದಲ್ಲಿ ಜನಿಸಿದ, ಪ್ರತಿಯೊಬ್ಬರ ಕಷ್ಟಕ್ಕೆ ಸ್ಪಂದಿಸುವ,ಯುವಕರ ಕಣ್ಮಣಿ ಮುದುಕಪ್ಪ ನಾಯಕ 108 ಆಂಬುಲೆನ್ಸ್ ಚಾಲಕರು ಆಯ್ಕೆಯಾಗಿದ್ದಾರೆ.**

ಯುವ ಸ್ಫೋಟ ಪತ್ರಿಕೆ ವಾರ್ಷಿಕೋತ್ಸವ ಸಂಸ್ಥೆಯ ಒಂದನೇ ಕಾರ್ಯಕ್ರಮ ಹಾಗೂ ಯುವ ಸ್ಫೋಟ ನವ ಭಾರತ ಸೇವಾ ಟ್ರಸ್ಟ್ (ರಿ) ರಾಜ್ಯಮಟ್ಟದ ಸೇವಾ ಸಮ್ಮೇಳನ ಕಾರ್ಯಕ್ರಮದ ವತಿಯಿಂದ ಕೊಡುವ "ರಾಜ್ಯ ಮಟ್ಟದ ಕಾಯಕ ರತ್ನ" ಪ್ರಶಸ್ತಿಯನ್ನು ದಿನಾಂಕ:–28–11–2025 ರಂದು ದೇವದುರ್ಗ ಪಟ್ಟಣದ ಖೇಣೆದ ಫಂಕ್ಷನ್ ಹಾಲ್ ನಲ್ಲಿ ಪ್ರಶಸ್ತಿಯನ್ನು ಸ್ವೀಕರಿಸಲಿದ್ದಾರೆ. ಸಾಮಜಿಕ ಮತ್ತು ರಾಜಕೀಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ.



ವೃತ್ತಿಯಲ್ಲಿ ಇವರು 108 ಆರೋಗ್ಯ ಕವಚ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಾರೆ.

ಪ್ರವೃತ್ತಿಯಲ್ಲಿ ಇವರೂ ಸಮಾಜಕ್ಕೆ ತನ್ನ ಕೈಲಾದ ಅಮೃತ ಹಸ್ತದ ಕಾರ್ಯವನ್ನು ಮಾಡುತ್ತಾ ಇರುತ್ತಾರೆ.ಮಕ್ಕಳಿಗೆ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು ರೂಪಿಸುವ ನಿಟ್ಟಿನಲ್ಲಿ ಸರಕಾರಿ ಶಾಲೆಯ ಮಕ್ಕಳಿಗೆ ಕ್ರೀಡೆಗೆ ಪ್ರೋತ್ಸಾಹ ನೀಡುವ ಮೂಲಕ ಉತ್ಸುಕರಾಗಿದ್ದಾರೆ. ಮುದುಕಪ್ಪ ನಾಯಕರ ಸಮಾಜ ಸೇವೆ ಮತ್ತು ಆರೋಗ್ಯ ರಕ್ಷಣೆ ಅಳಿಲು ಸೇವೆಯನ್ನು ಗುರುತಿಸಿ ರಾಜ್ಯ ಮಟ್ಟದ ಕಾಯಕ ರತ್ನ ಪ್ರಶಸ್ತಿಯನ್ನು "ಯುವ ಸ್ಫೋಟ ನವ ಭಾರತ ಸೇವಾ ಟ್ರಸ್ಟ್ (ರಿ), ಯುವ ಸ್ಫೋಟ ಪತ್ರಿಕೆ ವಾರ್ಷಿಕೋತ್ಸವ" ಸಮಾರಂಭದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು "ಗೌರವಾನ್ವಿತ ಶ್ರೀ ಆದರ್ಶ ನಾಯಕ ಸಂಸ್ಥಾಪಕರು ಅಧ್ಯಕ್ಷರು" ಯುವ ಸ್ಫೋಟ ನವ ಭಾರತ ಸೇವಾ ಸಂಸ್ಥೆ ದೇವದುರ್ಗ ಅವರು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಾಜ್ಯ ಮಟ್ಟದ ಕಾಯಕ ರತ್ನ ಪ್ರಶಸ್ತಿಗೆ ಆಯ್ಕೆಯಾದ ಇವರಿಗೆ ಎಲ್ಲಾ ಕಡೆಯಿಂದ ಸಾಧನೆಯನ್ನು ಮೆಚ್ಚಿ ಗ್ರಾಮದ ಹಿರಿಯರು,ಮುಖಂಡರು,ಆತ್ಮೀಯ ಬಂಧುಗಳು, ಹಿತೈಷಿಗಳೂ, ಗೆಳಯರ ಬಳಗ, ಕುಟುಂಬ ವರ್ಗದವರು ಪ್ರಶಸ್ತಿ ಲಭಿಸಿದಕ್ಕೆ ತುಂಬು ಹೃದಯದ ಹರ್ಷವನ್ನು ವ್ಯಕ್ತಪಡಿಸಿದ್ದಾರೆ.

# ವಿವಿಧ ಇಲಾಖೆ ಅಧಿಕಾರಿಗಳ ಗೈರು, ಕಾಟಾಚಾರಕ್ಕೆ ಮಕ್ಕಳ ಗ್ರಾಮ ಸಭೆ

❑ ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ಸೋಮವಾರ ಸಾಯಂಕಾಲ ನಾಲ್ಕು ಗಂಟೆಕ್ಕೆ ಮಕ್ಕಳ ಗ್ರಾಮ ಸಭೆ ಆಯೋಜನೆ ಮಾಡಲಾಗಿತ್ತು. ಈಗಾಗಲೇ ಮಕ್ಕಳ ಗ್ರಾಮ ಸಭೆಗಳು ಎಲ್ಲಾ ಗ್ರಾಮಗಳಲ್ಲಿ ಪ್ರಾರಂಭವಾಗಿದ್ದು, ಬಿ.ಗಣೇಕಲ್ ಗ್ರಾಮದಲ್ಲಿ ಮಾರ್ಗ ಸೂಚಿಯನ್ವವಯ ಸಭೆ ನಡೆಯದಿರುವುದು ಹಲವು ಅವಾಂತರಗಳೊಂದಿಗೆ ಕಾಟಾಚಾರಕ್ಕೆ ಸಭೆ ಮಾಡಲಾಗಿದೆ.**

ಅಲ್ಲದೇ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು, ಎಸ್.ಡಿ.ಎಮ್.ಸಿ.ಅಧ್ಯಕ್ಷರು, ಆರೋಗ್ಯ ಇಲಾಖೆ, ಪೋಲೀಸ್ ಇಲಾಖೆ, ಶಿಕ್ಷಣ



ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಾರಿಗೆ ಇಲಾಖೆ, ಅರಣ್ಯ ಇಲಾಖೆ ವಿವಿಧ ಇಲಾಖೆಗಳ ಅಧಿಕಾರಿಗಳು ಮಕ್ಕಳ ಗ್ರಾಮ ಸಭೆಗೆ ಗೈರು ಆಗಿರುವು ಬಹಳ ವಿಪರ್ಯಾಸ. ಆ ಮಕ್ಕಳ ಸಮಸ್ಯೆ ಯಾರು ಮುಂದೆ ಹೇಳಿ ಕೋಳ್ಳಬೇಕ.

ಮಕ್ಕಳ ಗ್ರಾಮಸಭೆ ನಾಮಕಾವಸ್ಥೆಯಾಗಿರದೆ, ಮಕ್ಕಳ ಹಕ್ಕಗಳು ಹಾಗೂ ಶಾಲೆಗಳಲ್ಲಿರುವ ಸೌಕರ್ಯಗಳ ಕು–ರಿತು ಚರ್ಚೆಯ ವೇದಿಕೆಯಾಗಬೇಕಾದ ಸಭೆ. ಕೇವಲ ಛಾಯಾಚಿತ್ರಗಳ ಸಂಗ್ರಹಣೆಗೋಸ್ಕರ ಈ ಸಭೆ ನಡೆಸಲಾಗಿದೆ. ಎಂದು ಎಚ್. ಎಸ್.ನಾಯಕ ಆರೋಪಿಸಿದ್ದಾರೆ.

ಮಕ್ಕಳ ಗ್ರಾಮ ಸಭೆಯಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ವೆಂಕೋಬ ನಾಯಕ ಮತ್ತು ಸಂಪನ್ಮೂಲ ವ್ಯಕ್ತಿಗಳಾದ ಸಿದ್ಧಲಿಂಗಪ್ಪ ಕಾಕರಗಲ್ ಇವರಿಬ್ಬರನ್ನು ಬಿಟ್ಟು ಉಳಿದ ಎಲ್ಲಾ ಅಧಿಕಾರಿಗಳು ಗೈರು ಆಗಿದ್ದಾರೆ. ಇದು ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯವೇ? ಅಥವಾ ಅಧಿಕಾರಿಗಳಿಗೆ ಮಾಹಿತಿ ನೀಡದೇ ಮಕ್ಕಳ ಗ್ರಾಮ ಸಭೆ ಮಾಡಿ ಪಂಚಾಯಿತಿ ಕೈತೊಳೆದುಕೊಂಡು ಬಿಟ್ಟಿತ್ತಾ? ಮಕ್ಕಳು ಶಾಲೆಗಳಲ್ಲಿ ಅನುಭವಿಸುವ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಸಕಾಲದಲ್ಲಿ ಸ್ಪಂದಿಸಿದಾಗ ಮಾತ್ರ ಮಕ್ಕಳ ಗ್ರಾಮ ಸಭೆ ಎನಿಸಿಕೊಳ್ಳುತ್ತದೆ. ಆದರೆ ಬಿ.ಗಣೇಕಲ್ ಗ್ರಾಮದಲ್ಲಿ ಎಲ್ಲಾ ಅಧಿಕಾರಿಗಳು ಗೈರು ಆಗಿದ್ದು ಕಾಟಾಚಾರಕ್ಕೆ ಮಕ್ಕಳ ಗ್ರಾಮ ಸಭೆ ನಡೆಸಲಾಗಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ನೇಮಕಾತಿ ಪ್ರಕಟಣೆ

26 NHB ನೇಮಕಾತಿ 2025 10 ಮ್ಯಾನೇಜರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ NHB ನೇಮಕಾತಿ 2025: 10 ಮ್ಯಾನೇಜರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ವಸತಿ ಬ್ಯಾಂಕ್ ನವೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಮ್ಯಾನೇಜರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 28-ನವೆಂಬರ್-2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. https://recruitment.nhbonline.org.in/ ?Official Website: nhb.org.in 28-ನವೆಂಬರ್-2025

## ಕೋಣಚಪ್ಪಳಿ ಗ್ರಾಮದ ಕೃಷಿ ಮತ್ತು ಗ್ರಾಮೀಣ ಕಾರ್ಮಿಕ ಸಂಘದ ಪದಾಧಿಕಾರಿಗಳ ಆಯ್ಕೆ

❏ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ದೊಂಡಬಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೋಣಚಪ್ಪಳಿ ಗ್ರಾಮದಲ್ಲಿ ಕೃಷಿ ಮತ್ತು ಗ್ರಾಮೀಣ ಕಾರ್ಮಿಕರ ಸಂಘದ ಗ್ರಾಮ ಘಟಕ ಮಾಡಲಾಯಿತು.**



ಅಧ್ಯಕ್ಷರಾಗಿ ಶರಣಬಸವ,ಪ್ರಧಾನ ಕಾರ್ಯದರ್ಶಿಯಾಗಿ ನಾಗಲಿಂಗ ಸೇರಿದಂತೆ 14 ಜನ ಸದಸ್ಯರ ಸಮಿತಿಯನ್ನು ಸಭೆಯೂ ಸರ್ವಾನುಮತದಿಂದ ಆಯ್ಕೆ ಮಾಡಿದೆ ಎಂದು ತಾಲ್ಲೂಕ ಸಮಿತಿ ಅಧ್ಯಕ್ಷ ಲಿಂಗಣ್ಣ ಮಕಾಶಿ ಪತ್ರಿಕೆಗೆ ತಿಳಿಸಿದರು. ಕೃಷಿ ಕೂಲಿಕಾರರಿಗೆ ನರೇಗಾ ಯೋಜನೆಯಡಿ 200 ದಿನ ಕೆಲಸ ನೀಡಬೇಕು, 600 ಕೂಲಿ ನಿಗದಿ ಮಾಡಬೇಕು, 60 ವರ್ಷ ಮೇಲ್ಪಟ್ಟ ಹಿರಿಯ ಕೂಲಿಕಾರರಿಗೆ ಪಿಂಚಣಿ ಸೌಲಭ್ಯ ನೀಡಬೇಕು ಎಂದು.

## ರಾಯಚೂರು ಜಿಲ್ಲೆಯಲ್ಲಿ ಭತ್ತ ಖರೀದಿ ಕೇಂದ್ರ ಆರಂಭ: ಜಿಲ್ಲಾಧಿಕಾರಿ ನಿತೀಶ್ ಕೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 25 (ಕ.ವಾ.): ರಾಜ್ಯ ಸರ್ಕಾರದ ಆದೇಶದಂತೆ, 2025-26ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ರೈತರಿಂದ ಪ್ರತಿ ಎಕರೆಗೆ 25 ಕ್ವಿಂಟಾಲ್ ನಂತೆ ಗರಿಷ್ಠ 50 ಕ್ವಿಂಟಾಲ್ ಭತ್ತ, ಸಾಮಾನ್ಯ ಪ್ರತಿ ಕ್ವಿಂಟಾಲ್‌ಗೆ ರೂ. 2,369 ಹಾಗೂ ಭತ್ತ ಗ್ರೇಡ್-ಎ ಪ್ರತಿ ಕ್ವಿಂಟಾಲ್‌ಗೆ ರೂ. 2,389 ರಂತೆ ಖರೀದಿಸಲು ಮಾನವಿ ಮತ್ತು ಸಿಂಧನೂರು ತಾಲೂಕು ಕೇಂದ್ರಗಳಲ್ಲಿ ನೋಂದಣಿ ಮತ್ತು ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ತಿಳಿಸಿದ್ದಾರೆ.**

ಮಾನವಿಯ ಎಪಿಎಂಸಿ ಆವರಣದಲ್ಲಿನ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಸಗಟು ಮಳಿಗೆ ಮತ್ತು ಸಿಂಧನೂರು ತಾಲೂಕಿನ ಬಪ್ಪೂರು ರಸ್ತೆಯಲ್ಲಿನ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಸಗಟು ಗೋದಾಮು ಆವರಣಗಳನ್ನು ನೋಂದಣಿ ಮತ್ತು ಖರೀದಿ ಕೇಂದ್ರ ಎಂದು ಗುರುತಿಸಲಾಗಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಭತ್ತ ಖರೀದಿಸಬೇಕಾಗಿರುವುದರಿಂದ ರೈತ ಭಾಂದವರು ತಮ್ಮ ಹತ್ತಿರದ ನೋಂದಣಿ ಕೇಂದ್ರಗಳಲ್ಲಿ ಡಿಸೆಂಬರ್ 31ರವರೆಗೂ ರೈತರ ನೋಂದಣಿಯನ್ನು ಮಾಡಿಕೊಳ್ಳಲಾಗುವುದು ಹಾಗೂ ನೋಂದಾಯಿತ ರೈತರಿಂದ ಖರೀದಿ ಪ್ರಕ್ರಿಯೆಯನ್ನು 2025ರ ನವೆಂಬರ್ ಮಾಹೆಯಿಂದ ಆರಂಭಿಸಿ 2026ರ ಫೆಬ್ರವರಿ 28ರವರೆಗೂ ನಿಗಧಿಪಡಿಸಲಾಗಿರುತ್ತದೆ. ಕೃಷಿ ಇಲಾಖೆಯವರು ಸಿದ್ದಪಡಿಸಿದ ಫ್ರೂಟ್ಸ್ ಎಂಬ ತಂತ್ರಾಂಶದಲ್ಲಿ ನಮೂದಿಸಿರುವ ಬೆಳೆಯ ಆಧಾರದ ಮೇಲೆ ರೈತರ ಹೆಸರನ್ನು ನೋದಾಯಿಸಿಕೊಳ್ಳಲಾಗುವುದು. ಒಂದು ವೇಳೆ ಫ್ರೂಟ್ಸ್ ತಂತ್ರಾಂಶದಲ್ಲಿ ತೊಂದರೆಯಿದ್ದಲ್ಲಿ ಹತ್ತಿರವಿರುವ ರೈತ ಸಂಪರ್ಕ ಕೇಂದ್ರಗಳಿಗೆ ಭೇಟಿ ನೀಡಿ ತಂತ್ರಾಂಶದಲ್ಲಿ ಸರಿಪಡಿಸಿಕೊಂಡು ಈ ಯೋಜನೆಯಡಿಯಲ್ಲಿ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ

# ಬಳಗಾನೂರಿಗೆ ಕೀಟ ಶಾಸ್ತ್ರಜ್ಞರ ತಂಡ ಭೇಟಿ ಆನೆಕಾಲು ರೋಗ ಕೀಟ ಅಧ್ಯಯನ

❏ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ನ.25,ರಾಜ್ಯ ಕೀಟ ಶಾಸ್ತ್ರಜ್ಞ ಅದ್ಯಯನ ತಂಡ ತಾಲೂಕಿನ ವಿವಿಧ ಗ್ರಾಮಗಳಿಗೆ ಬೇಟಿ ನೀಡಿ ಸೊಳ್ಳೆಗಳಿಂದ ಹರಡುವ ರೋಗ ಅದ್ಯಯನ ನಡೆಸಿತು. ಜೀತುಲಾಲ್ ಪವಾರ ಬೀದರ, ಮಹದೇವ ಮೈಸೂರು,ಇವರ ನೇತೃತ್ವದ ರಾಜ್ಯ ಕೀಟ ಶಾಸ್ತ್ರಜ್ಞ ಅಧ್ಯಯನ ತಂಡ ತಾಲ್ಲೂಕಿನ ಬಳಗಾನೂರು ಜವಳಗೇರಾ, ನಗರ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಬರುವ ಆಯ್ದ ಗ್ರಾಮಗಳಲ್ಲಿ ಬೇಟಿ ನೀಡಿ ಆನೆ ಕಾಲು ರೋಗ ಹರಡಿಸುವ ಸೊಳ್ಳೆಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಿತು.**

ಎಂಟಮಾಲಾಜಿಕಲ್ ಕಾರ್ಯದಿಂದ ಗ್ರಾಮೀಣ ಪ್ರದೇಶಗಳಲ್ಲಿ ಸೊಳ್ಳೆಯಿಂದ ಹರಡುವ ಸಾಂಕ್ರಾಮಿಕ ರೋಗಗಳ ತಡೆಗಟ್ಟಲು ನಿರ್ಧಿಷ್ಟವಾದ ಸೊಳ್ಳೆಯ ಅಧ್ಯನ ಅಗತ್ಯವಿದೆ. ಇದರ ಪ್ರಭಾವ ಮತ್ತು ಹರಡುವಿಕೆ ತಡೆಗಟ್ಟಲು ಅಧ್ಯಯನದಿಂದ ಮಾತ್ರ ಸಾಧ್ಯವಾಗಿದ್ದು ಆನೆಕಾಲು ರೋಗವು,ಚರಂಡಿಗಳಲ್ಲಿ ಹೆಚ್ಚಾಗಿ ಹುಟ್ಟುವ ಕ್ಯೂಲೆಕ್ಸ ಜಾತಿಯ ಕ್ವಿಂಕಿಫಿಲಿಯಾ ಎಂಬ ಉಪಜಾತಿ ಸೊಳ್ಳೆಗಳಿಂದ ಹರಡುತ್ತದೆ ಎಂದರು. ಈ ರೋಗ ಒಂದು ಎರಡು ವರ್ಷದಲ್ಲಿ ಬರುವುದಿಲ್ಲ ಸೊಂಕಿತ ಸೊಳ್ಳೆಯಿಂದ ಮೇಲಿಂದ ಮೇಲೆ ಕಚ್ಚಿದರೆ ಕನಿಷ್ಠ 5 ವರ್ಷಗಳ ನಂತರ ಕಾಲು,ಕೈ,ಮತ್ತು ದೇಹದ ಅನೇಕ ಭಾಗದಲ್ಲಿ ಊತ ಕಾಣಿಸಿಕೊಂಡು ನರಕ ಯಾತನೆ ಅನುಭವಿಸಬೇಕಾಗುತ್ತದೆ.



ಗಂಡಸರಲ್ಲಿ ವೃಷಣ ಬಾವು ಸೇರಿ ಲಿಂಫ್ಯಾಟಿಕ್ ಫೀಲಾರಿಯಾಸಿಸ್ ರೋಗ ಉಲ್ಬಣಕ್ಕೆ ಎಡೆಮಾಡಿಕೊಡುತ್ತದೆ ಎಂದು ನಿಯೋಜಿತ ಬೀದರ ಜಿಲ್ಲೆಯ ಕೀಟಶಾಸ್ತ್ರಜ್ಞ ಜೀತುಲಾಲ ಪವಾರ ರವರು ಸಾರ್ವಜನಿಕರಿಗೆ ಮಾಹಿತಿ ನೀಡಿದರು. ಕೀಟಶಾಸ್ತ್ರಜ್ಞ ಅಧ್ಯಯನ ತಂಡ ತಾಲೂಕಿನ ಬಳಗಾನೂರು, ಪಿ.ಡಬ್ಲೂ.ಡಿ ಕ್ಯಾಂಪ್,ವೆಂಕಟೇಶ್ವರ ನಗರ,ಮಹೆಬೂಬಿಯಾ ಕಾಲೋನಿ ಗ್ರಾಮಗಳಲ್ಲಿ ಡೆಂಗ್ಯೂ,ಚಿಕುಂಗುನ್ಯಾ, ಮಲೇರಿಯಾ ಹಾಗೂ ವಿಶೇಷವಾಗಿ ಆನೆಕಾಲು ರೋಗಗಳಿಗೆ ಕಾರಣವಾಗುವ ಸೊಳ್ಳೆಗಳ ಸಂಗ್ರಹ ಮತ್ತು ಅಧ್ಯಯನ ಕಾರ್ಯಗಳು ನಡೆಸುತ್ತಿದ್ದು, ಕಾರ್ಯದ ಮುಖ್ಯ ಉದ್ದೇಶಗಳು ಆಯ್ದ ಗ್ರಾಮಗಳಲ್ಲಿ ವಿವಿಧ ವಿಧದ ಸೊಳ್ಳೆಗಳ ಸಂಗ್ರಹಣೆ ಮತ್ತು ಜಾತಿ ಗುರುತಿಸುವುದು.

ಡೆಂಗ್ಯೂ, ಚಿಕುಂಗುನ್ಯಾ, ಮಲೇರಿಯಾ ಮತ್ತು ಆನೆಕಾಲು (ಫಿಲೇರಿಯಾ) ಇಂತಹ ಪ್ರಮುಖ ಸಾಂಕ್ರಾಮಿಕ ರೋಗಗಳ ಹರಡುವಿಕೆಗೂ ಕಾರಣವಾಗುವ ಸೊಳ್ಳೆಗಳ ವರ್ಗೀಕರಣ. ಗ್ರಾಮೀಣ ಸಾರ್ವಜನಿಕರಲ್ಲಿ ಈ ಸೊಳ್ಳೆಗಳು ಉಂಟುಮಾಡುವ ಆರೋಗ್ಯ ಶಿಕ್ಷಣ ಮತ್ತು ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಅಗತ್ಯವಾದ ಪರಿಹಾರ ಕ್ರಮಗಳ ಪ್ರಚಾರಕ್ಕೆ ಆರೋಗ್ಯ ಇಲಾಖೆ ಮುಂದಾಗಿರುತ್ತದೆ ಎಂದರು. ತಾಲೂಕಾ ಮೇಲ್ವಿಚಾರಕ ಮಾತನಾಡಿ ಈಡಿಸ್ ಈಜಿಪ್ಟಿ, ಅನೋಫಿಲಿಸ್,ಕುಲಿಕ್ಸ್ ಪ್ರಭೇದಗಳ ಸೊಳ್ಳೆಗಳ, ಬೆಳವಣಿಗೆ ಮತ್ತು ಹರಡುವ ಸ್ಥಳಗಳ ಪರೀಕ್ಷೆ ಮಾಡಿ ಹರಡದಂತೆ ಮುನ್ನೆಚ್ಚರಿಕಾ ಕ್ರಮಗಳಿಗೆ ಆರೋಗ್ಯ ಇಲಾಖೆಯ ಲಾರ್ವಾ ಸಮೀಕ್ಷೆಗಳು,ಸೊಳ್ಳೆ ಉತ್ಪತ್ತಿ ತಾಣಗಳ ಸಮೀಕ್ಷೆ ಮತ್ತು ನಿಯಂತ್ರಣ ಕುರಿತು ಸಾರ್ವಜನಿಕರ ಜೊತೆ ಆರೋಗ್ಯ ಶಿಕ್ಷಣ ಚಟುವಟಿಕೆ ಪರಿಸರ ವ್ಯವಸ್ಥೆಯಲ್ಲಿ ನೈರ್ಮಲೀಕರಣ ಹಾಗೂ ವೈಜ್ಞಾನಿಕ ಸೊಳ್ಳೆ ನಿರೋಧಕ ಕ್ರಮಗಳ ಕುರಿತು ವಿಸ್ತಾರವಾದ ಜಾಗೃತಿ ಅಭಿಯಾನ ಕೈಗೊಳ್ಳಲು ಈ ಕಾರ್ಯಕ್ರಮ ಅನುಕೂಲವಾಗಿದೆ ಎಂದರು.

ಆರೋಗ್ಯ ಇಲಾಖೆ ಮತ್ತು ಸಾರ್ವಜನಿಕರ ಪಾಲುದಾರಿಕೆ ಆರೋಗ್ಯ ಇಲಾಖೆ ಹಾಗೂ ಗ್ರಾಮ ಪಂಚಾಯತ್ ಸಂಂ-ಯುಕ್ತವಾಗಿ, ಆಶಾ ಕಾರ್ಯಕರ್ತರು ಮತ್ತು ಸ್ಥಳೀಯ ಆರೋಗ್ಯ ನಿರೀಕ್ಷಕರು ಈ ಕೆಲಸದಲ್ಲಿ ಸಕ್ರಿಯ ಪಾತ್ರ ವಹಿಸಿಕೊಂಡಿದ್ದು ಸಾರ್ವಜನಿಕರು ಸಹಕರಿಸಲು ಮತ್ತು ಆನೆಕಾಲು ರೋಗ ಮುಕ್ತ ಹೊಂದಲು ಮನವಿ ಮಾಡಿಕೊಂಡರು. ಜನರಲ್ಲಿ ಪ್ಲಾಸ್ಟಿಕ್,ಡ್ರಮ್, ಡೋಣಿ ಮುಂತಾದ ನೀರು ಸಂಗ್ರಾಕಾಣಗಳಲ್ಲಿ ನಿರಂತರ ಬಳಕೆ ವೈಜ್ಞಾನಿಕ ತೆರವು ಮತ್ತು ಸ್ವಚ್ಚತೆ ಕಾಯ್ದಿಡುವ ಬಗ್ಗೆ ಅರಿವು ಮೂಡಿಸಿದರು. ಬಳಗಾನೂರು ಆಶಾ ಕಾರ್ಯಕರ್ತರಾದ ರೇಣುಕಾ ಸಜ್ಜನ್,ರೇಣುಕಮ್ಮ ಕುಂಬಾರ, ಶಾಂತಾ ಪಿ,ಹನಮಂತಿ,ಪಟ್ಟಣ ಪಂಚಾಯ್ತಿ ಸಮುದಾಯ ಸಂಚಾಲಕರಾದ ಗೀತಾ ಎಸ್, ಸೇರಿದಂತೆ ಸಾರ್ವಜನಿಕರು ಹಾಜರಿದ್ದರು.

# ಸನ್ ರೈಸ್ ಕಾಲೇಜಿನ ಉಪನ್ಯಾಸಕ ರಾಜೇಶ್ ಮೇದಾರ್ ರವರ ಸಂಶೋಧನಾ ಲೇಖನ ಅಂಗೀಕಾರ ಯಶಸ್ವಿ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜೈವಿಕ ಸಂಶೋಧನಾ ಕ್ಷೇತ್ರದಲ್ಲಿ ಮಹತ್ವದ ಸಾಧನೆ. ತುಮಕೂರು ವಿಶ್ವವಿದ್ಯಾಲಯ ದಲ್ಲಿ ಪಿ ಎಚ್ ಡಿ ವಿದ್ಯಾಭ್ಯಾಸ ನಿರತ ರಾಜೇಶ್ ಮೇದಾರ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತೊಮ್ಮೆ ಕನ್ನಡಿಗರ ಹೆಗ್ಗಳಿಕೆಯನ್ನು ಹೆಚ್ಚಿಸಿದ್ದಾರೆ.**

"ಏಗಲ್ ಮಾರ್ಮೆಲೋಸ್ ಬೀಜದ ಸಾರವನ್ನು ಬಳಸಿಕೊಂಡು ಖಿಔ2 ಮತ್ತು ೦೦-ಖಿಔ2 ನ್ಯಾನೊಪರ್ಟಿಕಲ್‌ಗಳ ಜೈವಿಕ ಸಂಶ್ಲೇಷಣೆ ಮತ್ತು ಮಾನವ ಲ್ಯುಕೇಮಿಕ್ ಕೋಶ ಪ್ರಸರಣ, ಉರಿಯೂತ ಮತ್ತು ಆಕ್ಸಿಡೇಟಿವ್ ಒತ್ತಡದಲ್ಲಿ ಅವುಗಳ ಸಂಭಾವ್ಯ ಪರಿಣಾಮಕಾರಿತ್ವದ ತನಿಖೆ" ಎಂಬ ಶೀರ್ಷಿಕೆಯ ಸಂಶೋಧನಾ ಲೇಖನವು, ಪ್ರಸಿದ್ಧ ಅಂತಾರಾಷ್ಟ್ರೀಯ ಜರ್ನಲ್ Biological Trace Element Research ( Springer) ನಲ್ಲಿ ಪ್ರಕಟಣೆಗೆ ಅಂಗೀಕರಿಸಲಾಗಿದೆ. ಈ ಸಂಶೋಧನಾ ಲೇಖನವನ್ನು ರಾಜೇಶ್ ಮೇದಾರ್ ಹಾಗೂ ಸಹ-ಲೇಖಕರು ಸಂಯುಕ್ತವಾಗಿ ರಚಿಸಿದ್ದು, ಮಾರ್ಗದರ್ಶಕರು ಮಾರ್ಗದರ್ಶಕರಾದ ಡಾ!!. ಭಾಗ್ಯಲಕ್ಷ್ಮಿ ಎಂ ಪ್ರೊಫೆಸರ್ ಜೀವ ರಸಾಯನಶಾಸ್ತ್ರ



ವಿಭಾಗದ ಮೇಲ್ವಿಚಾರಣೆಯಲ್ಲಿ ಪೂರ್ಣಗೊಂಡು ಪರಿಶೀಲಿಸಿದ ನಂತರ ಪ್ರಕಟಣೆಗೆ ಅನುಮೋದನೆ ದೊರಕಿದೆ. ಜರ್ನಲ್ ಸಂಪಾದಕೀಯ ವಿಭಾಗದಿಂದ ಬಂದ ಅಧಿಕೃತ ಪತ್ರದಲ್ಲಿ, "ಈ ಸಂಶೋಧನಾ ಲೇಖನವು ವಿಜ್ಞಾನ ಸಮುದಾಯಕ್ಕೆ ಮಹತ್ವದ ಕೊಡುಗೆಯಾಗಿದೆ. ಪರಿಶೀಲನೆಯ ನಂತರ ಪ್ರಕಟಣೆಗೆ ಸ್ವೀಕರಿಸಿದ್ದೇವೆ" ಎಂಬ ಸಂದೇಶ ನೀಡಲಾಗಿದೆ. ಈ ಸಾಧನೆಯಿಂದ ನಮ್ಮ ವಿಜ್ಞಾನಿಗಳ ಪರಿಶ್ರಮ, ಅಧ್ಯಯನ ಮತ್ತು ಜ್ಞಾನಕ್ಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಮತ್ತೊಂದು ಗೌರವ ದೊರೆತಿದೆ ಶ್ರೀ ರಾಜೇಶ್ ಮೇದಾರ್ ಸನ್ ರೈಸ್ ಗ್ರೂಪ್ ಇನ್ಸ್ಟಿಟ್ಯೂಷನ್ ನಲ್ಲಿ ಜೀವರಸಾಯನಶಾಸ್ತ್ರ ಉಪನ್ಯಾಸಕರಾಗಿ ಕಾರ್ಯನಿರ್ವಹಿಸ್ತಾ ಇದ್ದು ಸದರಿವರ ಸಾಧನೆಯು ಕನ್ನಡಿಗರ ಸಾಧನೆ ಎಂದು ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಅತ್ತಾರ್ ಪ್ರಶಂಸೆ ವ್ಯಕ್ತಪಡಿಸಿದರು ಮತ್ತು ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ ನ ಸಹೋದ್ಯೋಗಿಗಳು ಸಿಬ್ಬಂದಿ ವರ್ಗದವರು ಶುಭಾಶಯಗಳು ಸಂತೋಷ ವ್ಯಕ್ತಪಡಿಸಿದರು.

# ಜಾಗಿರ ವೆಂಕಟಪೂರ, ರಘುನಾಥಹಳ್ಳಿ ಸುಲ್ತಾನಪೂರ ಗ್ರಾಮಗಳಲ್ಲಿ ನಾನಾ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ನವೆಂಬರ್ 25 (ಕ.ವಾ.): ಮಹರ್ಷಿ ವಾಲ್ಮೀಕಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಹಾಗೂ ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ ಅವರು ನವೆಂಬರ್ 25ರಂದು ಜಾಗಿರ ವೆಂಕಟಪೂರ, ರಘುನಾಥಹಳ್ಳಿ, ಸುಲ್ತಾನಪೂರ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ಹಾಗೂ ಉದ್ಘಾಟನೆ ನೆರವೇರಿಸಿದರು.**

ಜಾಗಿರ ವೆಂಕಟಪೂರ ಗ್ರಾಮದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಶ್ರೀ ಮಾರೆಮ್ಮದೇವಿ ದೇವಸ್ಥಾನ ಅಭಿವೃದ್ಧಿಗೆ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಮ್ಯಾಕ್ರೋ ಯೋಜನೆಯಡಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಶಾಸಕರು ಭೂಮಿಪೂಜೆ ನೆರವೇರಿಸಿದರು. ರಘುನಾಥಹಳ್ಳಿ ಗ್ರಾಮದಲ್ಲಿ ಶಾಸಕರ



ಅನುದಾನದಡಿಯಲ್ಲಿ ಶ್ರೀ ಆಂಜನೇಯ್ಯ ಸ್ವಾಮಿ ಗುಡಿ ನಿರ್ಮಾಣಕ್ಕೆ ಶಾಸಕರು ಚಾಲನೆ ನೀಡಿದರು. ಕೆಕೆಆರ್‌ಡಿಬಿ ಮ್ಯಾಕ್ರೋ ಯೋಜನೆಯಡಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ, ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ, ಲೋಕಸಭಾ ಸದಸ್ಯರ ಅನುದಾನದಡಿ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಯಿತು.

ಸುಲ್ತಾನಪೂರ ಗ್ರಾಮದಲ್ಲಿ ಶಾಸಕರ ಅನುದಾನದಡಿಯಲ್ಲಿ ಶ್ರೀ ಮಾರೆಮ್ಮದೇವಿ ಗುಡಿ ಅಭಿವೃದ್ಧಿಗೆ ಮತ್ತು ಕೆಕೆಆರ್‌ಡಿಬಿ ಮ್ಯಾಕ್ರೋ ಯೋಜನೆಯಡಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಸಹ ಇದೆ ವೇಳೆ ಭೂಮಿ ಪೂಜೆ ನೆರವೇರಿತು.



ದೇವರ ದರ್ಶನ ಪಡೆದರು: ನವೆಂಬರ್ 25ರಂದು ಗ್ರಾಮೀಣ ಪ್ರವಾಸ ಕೈಗೊಂಡ ವೇಳೆಯಲ್ಲಿ ಶಾಸಕರಾದ ಬಸನಗೌಡ ದದ್ದಲ್ ಅವರು ಶ್ರೀ ಮಾರಿಕಾಂಬಾ ದೇವಿಯ, ಶ್ರೀ ಆಂಜನೇಯ್ಯ ಸ್ವಾಮಿ ಮತ್ತು ಮರಡಿ ಗಂಗಾಧರ ತಾತನವರ ದರ್ಶನಾಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ದೇವಸೂಗುರ ಬ್ಲಾಕ್ ಅಧ್ಯಕ್ಷರು, ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ನಾಮನಿರ್ದೇಶಿತ ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು, ಕಾರ್ಯಕರ್ತರು ಗ್ರಾಮಸ್ಥರು ಉಪಸ್ಥಿತರಿದ್ದರು.

# ರಾಜೇಂದ್ರ ಕುಮಾರ್ ಮೆಮೋರಿಯಲ್ ಅನುದಾನಿತ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸೋಮನಗೌಡ ಬಾದರ್ಲಿ ಉದ್ಘಾಟನೆ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು 25 ರಂದು ನಗರದ ರಾಜೇಂದ್ರ ಕುಮಾರ್ ಮೆಮೋರಿಯಲ್ ಅನುದಾನಿತ ಶಾಲೆಯಲ್ಲಿ ಟಿ.ಬಿ.ಪಿ ಕ್ಯಾಂಪ್ *ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಸೋಮನಗೌಡ ಗೌಡ ಬಾದರ್ಲಿ ಅವರು ಉದ್ಘಾಟನೆಯನ್ನು ಮಾಡಿದರು.**

ಈ ಪ್ರತಿಭಾ ಕಾರಂಜಿ ಇಲ್ಲಿ ವಿವಿಧ ಶಾಲೆಯ ಮಕ್ಕಳು ಭಾಗವಹಿಸಿದ್ದರು , ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಶೋಕ್ ಗೌಡ ಇವರು ವಹಿಸಿ ಮಕ್ಕಳ ಪ್ರತಿಭೆಗಳು ಎಲ್ಲಾ ಕ್ಷೇತ್ರಗಳಲ್ಲಿ ಅರಳಲಿ ಎಂದು ಹೇಳಿದರು. ಟಿ ಬಿ ಪಿ ವಲಯದ ಅಖಕ ಶ್ರೀ ಚನ್ನವೀರಗೌಡ ಪ್ರತಿಭಾಕಾರಂಜಿ ಮತ್ತು ಕಲೋತ್ಸವದ ಉದ್ದೇಶವನ್ನು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ತಿಳಿಸಿದರು. ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ್ದ ಶ್ರೀಯುತ ಸೋಮನಗೌಡ ಬಾದರ್ಲಿ ನಿರ್ದೇಶಕರು ಆಡಿಸಿಸಿ ಬ್ಯಾಂಕ್ ಸಿಂಧನೂರು ಕಾರ್ಯಕ್ರಮವನ್ನು ಉದ್ದೇಶಿಸಿ




ಮಾತನಾಡಿದ ಅವರು ಒಂದು ಅವಕಾಶವನ್ನು ಮಕ್ಕಳು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು ಶ್ರೀಯುತ ಬಸಲಿಂಗಪ್ಪ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಾಯಾಧಿಕಾರಿಗಳು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನವನ್ನು ವಹಿಸಿ ಈ ಒಂದು ಇಲಾಖೆಯ ಕಾರ್ಯಕ್ರಮವನ್ನು ನಿರ್ಣಾಯಕರು ನ್ಯಾಯ ನಿಷ್ಠೆಯಿಂದ ನಿರ್ಣಯವನ್ನು ನೀಡಿ ಮಕ್ಕಳ ನಿಜವಾದ ಪ್ರತಿಭೆಯನ್ನು ಗುರುತಿಸಲು ಕರೆ ನೀಡಿದರು.

ಭರತನಾಟ್ಯ ಪ್ರಥಮ ಸ್ಥಾನ ರಾಜೇಂದ್ರಕುಮಾರ್ ಪ್ರೌಢಶಾಲೆ ಚಿತ್ರಕಲೆ ಪ್ರಥ-'ಮ ಸ್ಥಾನ ದೀಪ ಆರ್ಯನ್ ಇಂಗ್ಲಿಷ್ ಮಾಧ್ಯಮ ಶಾಲೆ. ಕವನ ವಾಚನ ಪ್ರಥಮ ಮೌನಿಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಏಳರಾಗಿ ಕ್ಯಾಂಪ್ ಕಂಠಪಾಠ ನೆಹರು ನಿಸಾ ಪ್ರಥಮ ರೆಡ್ಡಿ ಕೆರೆಯ ಪ್ರಾಥಮಿಕ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಈ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ನೋಬಲ್ ಟೆಕ್ನೋ ಶಾಲೆಯ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ ಸ್ಪರ್ಧಿಸಿ ಪ್ರಥ-'ಮ ಮತ್ತು ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ ನೊಬೆಲ್ ಶಾಲೆಯ ವಿದ್ಯಾರ್ಥಿಗಳಾದ ಶ್ರೀನಿಧಿ ಸುಭಾಸ್ ?ಅಭಿನಯಗೀತೆಯಲ್ಲಿ ಪ್ರಥಮ ಸ್ಥಾನ ಜಸ್ವಂತ್ ಕಥೆ ಹೇಳುವುದರಲ್ಲಿ ಪ್ರಥಮ ಸ್ಥಾನ ಅರ್ಫಿಯಾ ದೇಶಭಕ್ತಿ ಗೀತೆಯಲ್ಲಿ ದ್ವಿತೀಯ ಸ್ಥಾನ ಕಾರ್ತಿಕ್?ಚಿತ್ರಕಲೆಯಲ್ಲಿ ದ್ವಿತೀಯ ಸ್ಥಾನ ರುಮೈಸಾಕಂಠ ಪಾಠದಲ್ಲಿ (ಇಂಗ್ಲಿಷ್)?ದ್ವಿತೀಯ ಸ್ಥಾನ ಅರೀಬ್ ಹಮ್ದಾನ್?ಧಾರ್ಮಿಕ ಪಠಣ (ಅರಬಿಕ್) ದ್ವಿತೀಯ ಸ್ಥಾನವನ್ನು ಗಳಿಸಿದ್ದಾರೆ ಹಾಗೂ ವಿವಿಧ ಶಾಲೆಯ ವಿದ್ಯಾರ್ಥಿಗಳು ಪ್ರಶಸ್ತಿಯನ್ನು ಪಡೆದಿದ್ದಾರೆ.. ಕಾರ್ಯಕ್ರಮದಲ್ಲಿ.

ಶಾಲೆಯ ವ್ಯವಸ್ಥಾಪಕರಾದ ಶ್ರೀಮತಿ ಸರಸ್ವತಿ ಪಾಟೀಲ್ ಮೇಡಂ ಅವರು. ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ತುಳಜಾ ರಾಣಿ. ಶ್ರೀಯುತ ಸೋಮಲಿಂಗಪ್ಪ ದೈಹಿಕ ಶಿಕ್ಷಣ ಪರಿವೀಕ್ಷಕರು ಸಿಂಧನೂರು ಶ್ರೀಯುತ ಬಸವರಾಜ ಆನೆಗುಂದಿ ಃಖಕ ಸಿಂಧನೂರು ಶ್ರೀ ವಿಠ್ಠಲ್ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷರು. ಎಸ್ ಕೆ ಪರಂಡಿ ಪ್ರೌಢಶಾಲಾ ಮುಖ್ಯ ಗುರುಗಳು ಉಪಸ್ಥಿತ-ರಿದ್ದರು. ಶ್ರೀಮತಿ ಪರ್ವೀನ್ ಶಿಕ್ಷಕಿ ಸ್ವಾಗತಿಸಿದರು ಶ್ರೀಮತಿ ರೇಣುಕಾ ಪ್ರಶಿಕ್ಷಣಾರ್ಥಿ ಪ್ರಾರ್ಥಿಸಿದರು ಬಹುಮಾನ ವಿತರಣೆ ಕುಮಾರಿ ರೇಷ್ಮಾ ಶಿಕ್ಷಕಿ ನೆರವೇ-ರಿಸಿದರು ಶ್ರೀ ಸತೀಶ ಪ್ರಭಾರಿ ಮುಖ್ಯ ಗುರುಗಳು ವಂದಿಸಿದರು ಕುಮಾರಿ ಲಕ್ಷ್ಮಿ ಶಿಕ್ಷಕಿ ಕಾರ್ಯಕ್ರಮವನ್ನು ನಿರೂಪಿಸಿದರು ಕಾರ್ಯಕ್ರಮದಲ್ಲಿ ವಲಯ ಮಟ್ಟದ ಎಲ್ಲಾ ಮುಖ್ಯಗುರುಗಳು ಸಹ ಶಿಕ್ಷಕರು ಮಕ್ಕಳು ಮತ್ತು ಅಡುಗೆ ಸಿಬ್ಬಂದಿಯವರು ಭಾಗವಹಿಸಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD in Pediatrics (ಶಿಶು ವೈದ್ಯಕೀಯ)

MD in Pediatrics (ಶಿಶು ವೈದ್ಯಕೀಯ) ಎನ್ನುವುದು ಮಕ್ಕಳು ಮತ್ತು ಹದಿಹರೆಯದವರಿಗೆ ಚಿಕಿತ್ಸೆ ನೀಡುವ ಸ್ನಾತಕೋತ್ತರ ವೈದ್ಯಕೀಯ ಪದವಿಯಾಗಿದೆ. ಮಕ್ಕಳ ವೈದ್ಯಕೀಯ (Pediatric Medicine) ಎಂಬುದು ಶಿಶುಗಳು, ಮಕ್ಕಳು ಮತ್ತು ಕಿಶೋರರ ಆರೋಗ್ಯ ಹಾಗೂ ಅಭಿವೃದ್ಧಿಗೆ ಮೀಸಲಾಗಿರುವ, ಅತೀನ ಜೀವನ ರಕ್ಷಕ ಮತ್ತು ಅತ್ಯಂತ ಅಗತ್ಯವಾದ ವೈದ್ಯಕೀಯ ಶಾಖೆಯಾಗಿದೆ. ಪೀಡಿಯಾಟ್ರಿಷಿಯನ್ಗಳು ಮಕ್ಕಳಲ್ಲಿನ ರೋಗಗಳನ್ನು ಗುರುತಿಸುವುದು, ಚಿಕಿತ್ಸೆ ನೀಡುವುದು, ಮತ್ತು ಅವನ್ನು ತಡೆಗಟ್ಟುವುದರಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಜೊತೆಗೆ, ಲಸಿಕೆ, ಆಹಾರ, ಮತ್ತು ವರ್ತನಾತ್ಮಕ ಆರೋಗ್ಯ ಕುರಿತು ಪೋಷಕರಿಗೆ ಮಾರ್ಗದರ್ಶನ ನೀಡುತ್ತಾರೆ. ಪೀಡಿಯಾಟ್ರಿಕ್ಸ್ನಲ್ಲಿ ಒಆ ಮಕ್ಕಳ ಆರೋಗ್ಯ ತಜ್ಞರಾಗಲು ಮತ್ತು ಅವರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ಬಯಸುವವರಿಗೆ ಅತ್ಯುತ್ತಮ ಆಯ್ಕೆಯಾಗಿದೆ. ಈ ಕಾರ್ಯಕ್ರಮವು ಪೀಡಿಯಾಟ್ರಿಕ್ ವೈದ್ಯಕೀಯ ಕ್ಷೇತ್ರದ ಸೈದ್ಧಾಂತಿಕ ಮತ್ತು practically ಜ್ಞಾನವನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತದೆ. ಇದರ ಫಲವಾಗಿ, ಪದವೀಧರರು ಆಸ್ಪತ್ರೆಗಳು, ಕ್ಲಿನಿಕ್ಗಳು ಮತ್ತು ಸಂಶೋಧನಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಪಡೆಯುತ್ತಾರೆ. ಮಕ್ಕಳಲ್ಲಿನ ರೋಗಗಳನ್ನು ಗುರುತಿಸುವುದು, ಚಿಕಿತ್ಸೆ ನೀಡುವುದು. ಜನ್ಮತಃ ಇರುವ ಸಮಸ್ಯೆಗಳು (Congenital disorders) ನಿರ್ವಹಿಸುವುದು. ತುರ್ತು ಮಕ್ಕಳ ಚಿಕಿತ್ಸೆಯಲ್ಲಿ ಪರಿಣಿತಿ (Pediatric Emergency). Neonatal ICU, Pediatric ICU ಯಲ್ಲಿ ಕಾರ್ಯನಿರ್ವಹಿಸುವ ಕೌಶಲ್ಯ. ಪ್ರತಿಬಂಧಕ ಆರೋಗ್ಯ (Preventive Pediatrics) ಲಸಿಕೆ, ಪೋಷಣೆ, ಬೆಳವಣಿಗೆ ಮೌಲ್ಯಮಾಪನ. ಪೀಡಿಯಾಟ್ರಿಕ್ ಕೌನ್ಸೆಲಿಂಗ್ ತಂದೆ–ತಾಯಿಗಳಿಗೆ ಮಾರ್ಗದರ್ಶನ. ಅರ್ಹತೆ: MBBSಪದವಿ ಪೂರ್ಣಗೊಳಿಸಿರಬೇಕು ಮತ್ತು NEET PG ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅವಧಿ: 3 ವರ್ಷಗಳು. ಉದ್ಯೋಗಾವಕಾಶಗಳು ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯರಾಗಿ. , ಮಕ್ಕಳ ಆಸ್ಪತ್ರೆಗಳು ಮತ್ತು ವಿಶೇಷ ವಿಭಾಗಗಳಲ್ಲಿ (NICU, PICU).,ಖಾಸಗಿ ವೈದ್ಯಕೀಯ ಕೇಂದ್ರ/ಕ್ಲಿನಿಕ್., ಉಪ–ವಿಶೇಷತೆಗಳಲ್ಲಿ (super-specialization) ಹೆಚ್ಚಿನ ಅಧ್ಯಯನ.,ವಿದ್ಯಾರ್ಥಿಗಳಿಗೆ ಬೋಧನೆ ಮತ್ತು ಶೈಕ್ಷಣಿಕ ಕ್ಷೇತ್ರ. ರಾಯಚೂರಿನಲ್ಲಿ ಪೀಡಿಯಾಟ್ರಿಕ್ಸ್‌ನಲ್ಲಿ ಎಂಡಿ ಪದವಿ ನೀಡುವ ಎರಡು ವೈದ್ಯಕೀಯ ಕಾಲೇಜುಗಳಿವೆ: ಖಾಸಗಿ ಸಂಸ್ಥೆಯಾದ ನವೋದಯ ವೈದ್ಯಕೀಯ ಕಾಲೇಜು ಮತ್ತು ಸರ್ಕಾರಿ ಕಾಲೇಜು ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆ (RIMS). ನವೋದಯ ವೈದ್ಯಕೀಯ ಕಾಲೇಜಿನ ಪೀಡಿಯಾಟ್ರಿಕ್ಸ್ ವಿಭಾಗವು ಇತ್ತೀಚೆಗೆ ತುರ್ತು ಆರೈಕೆ ಮತ್ತು ಸಂಶೋಧನೆಯಲ್ಲಿನ ತನ್ನ ಕೆಲಸಕ್ಕಾಗಿ PRERNI (ಪೀಡಿಯಾಟ್ರಿಕ್ ರೆಸಸಿಟೇಶನ್ ಮತ್ತು ಎಮರ್ಜೆನ್ಸಿ ರಿಸರ್ಚ್ ನೆಟ್‌ವರ್ಕ್ ಆಫ್ ಇಂಡಿಯಾ) ದಿಂದ ಮಾನ್ಯತೆ ಪಡೆದಿದೆ.

1ನೇ ಪುಟದಿಂದ....

ಎಲ್ಲವೂ ಆಗಲಿದೆ ಎಂದು ಸ್ಪಷ್ಟಪಡಿಸಿದರು. ಎರಡೂವರೆ ವರ್ಷ ಆದ ಮೇಲೆ ಸಿಎಂ ಸ್ಥಾನ ಬಿಟ್ಟುಕೊಡಬೇಕೆಂಬ ಮಾತು ಕೇಳಿ ಬರುತ್ತಿರುವ ಕುರಿತು ಸುದ್ದಿಗಾರರು ಮರು ಪ್ರಶ್ನೆ ಕೇಳಿದಾಗ ಪಕ್ಷದ ಹೈಕಮಾಂಡ್ ಏನೇ ನಿರ್ಧಾರ ತೆಗೆದುಕೊಂಡರೂ ಅದರಂತೆ ಮುಂದುವರೆಯುತ್ತೇವೆಂದರು.

ಶಾಸಕರ ಖರೀದಿ ಬಿಜೆಪಿ ಸಂಸ್ಕೃತಿ: ಡಿಕೆಶಿ ಗರಂ

ಶಾಸಕರ ಖರೀದಿ ಸಂಸ್ಕೃತಿ ಕಾಂಗ್ರೆಸ್ ಪಕ್ಷದ್ದಲ್ಲ ಅದು ಬಿಜೆಪಿ ಸಂಸ್ಕೃತಿ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿಕೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು. ಪಟ್ಟಣದಲ್ಲಿ ತಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನವರಿಂದಲೇ ಕಾಂಗ್ರೆಸ್ ಶಾಸಕರ ಖರೀದಿ ಆರೋಪ ವಿಚಾರಕ್ಕೆ ಸಂಬಂಧಿಸಿದಂತೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ ಅವರು, ಶಾಸಕರ ಖರೀದಿ ಸಂಸ್ಕೃತಿ ಬಿಜೆಪಿಯಲ್ಲಿದೆ ಮುಖ್ಯಮಂತ್ರಿ ಆಗಬೇಕಾದರೆ ಎಷ್ಟು ಸಾವಿರ ಕೋಟಿ ಕೊಡಬೇಕು ಅಂತ ಬಿಜೆಪಿಯವರೇ ಹಿಂದೆ ಹೇಳಿದ್ದಾರೆ. ಅಸೆಂಬ್ಲಿ ಯಲ್ಲೂ ಸಹ ಎಷ್ಟೆಷ್ಟೋ ಕೋಟಿ ಕೊಟ್ಟು ಶಾಸಕರ ಖರೀದಿ ಬಗ್ಗೆ ದಾಖಲೆಗಳಲ್ಲೇ ಬಂದಿದೆ. ಅವರು ಮಾಡುತ್ತಿದ್ದ ಪ್ರವೃತ್ತಿಯನ್ನು ಈಗ ಅವರು ನೆನಸಿಕೊಳ್ಳುತ್ತಿದ್ದಾರೆ ಅಷ್ಟೇ ಎಂದರು. ಸಿಎಂ ಬದಲಾವಣೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುವುದೇ ನಮಗೆ ವೇದ ವಾಕ್ಯ ಎಂದರು.

# ಬೇಡಿಕೆಗಳ ಈಡೇರಿಕೆಗೆ ಗ್ರಾಮ ಪಂಚಾಯತಿ ನೌಕರರ ಅನಿರ್ಧಿಷ್ಟಾವಧಿ ಧರಣಿ ಆರಂಭ 15ನೇ ಹಣಕಾಸು ಅನುದಾನದಿಂದಲೇ ವೇತನ ಪಾವತಿಸಲು ಆಗ್ರಹ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಗ್ರಾಮ ಪಂಚಾಯತಿ ನೌಕರರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇ–ರಿಸದೆ ಮುಂದೆ ತಳ್ಳುತ್ತಿರುವ ಪರಿಸ್ಥಿತಿಯಿಂದ, 25.11.2025ರಿಂದ ತಾಲ್ಲೂಕು ಪಂಚಾಯತ್ ಕಾರ್ಯಾಲಯ ಮಾನ್ವಿ ಎದುರು ಗ್ರಾಮ ಪಂಚಾಯತಿ ನೌಕರರು ಅನಿರ್ಧಿಷ್ಟಾವಧಿ ಧರಣಿ ಆರಂಭಿಸಿದ್ದಾರೆ. ವೇತನ, ನೇಮಕ, ಜೀವವಿಮೆ ಸೇರಿದಂತೆ ಮೂಲಭೂತ ಸೇವಾ ಹಕ್ಕುಗಳಿಗೆ ಸಂಬಂಧಿಸಿದ ಬೇಡಿಕೆಗಳು ಇನ್ನೂ ಜಾ–ರಿಯಾಗದಿರುವುದನ್ನು ನೌಕರರು ಖಂಡಿಸಿದರು.**

"ನಮ್ಮ ಬೇಡಿಕೆಗಳನ್ನು 11.11.2025ರಂದು ಮನವಿ ಮೂಲಕ ಸಲ್ಲಿಸಿದ್ದರೂ 20.11.2025ರೊಳಗೆ ಯಾವುದೇ ಕ್ರಮವಾಗಲಿಲ್ಲ. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಆದೇಶಿಸಿದ್ದರೂ ಸ್ಪಷ್ಟ ಪ್ರಗತಿ ಶೂನ್ಯ. ನೌಕರರ ಬದುಕಿನ ಭದ್ರತೆಗೆ ಸಂಬಂಧಿಸಿದ ವಿಷಯಗಳಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿರುವುದು ವಿಷಾದನೀಯ," ಎಂದು ಕರ್ನಾಟಕ ರಾಜ್ಯ ಗ್ರಾಮ



ಪಂಚಾಯತಿ ನೌಕರರ ಸಂಘ, ತಾಲ್ಲೂಕು ಘಟಕದ ಗೌರವಾಧ್ಯಕ್ಷ ಹೆಚ್. ಶರ್ಫುದ್ದೀನ್ ಪೋತ್ನಾಳ್ ಧರಣಿ ಸ್ಥಳದಲ್ಲಿ ಮಾತನಾಡಿದರು.

ಹಾಗೂ, "ಹಲವಾರು ತಿಂಗಳಿಂದ ಬಾಕಿ ಉಳಿದ ವೇತನ, ಮರಣೋತ್ತರ ನೇಮಕ ಮತ್ತು ನಿವೃತ್ತಿ ಉಪಧನ ಇವೆಲ್ಲವು ನೌಕರರ ಹಕ್ಕುಗಳು. ಸರ್ಕಾರದ ಆದೇಶ ಜಾರಿ ಆಗದೇ ಇರುವುದೇ ಈ ಹೋರಾಟಕ್ಕೆ ಕಾರಣ. ಬೇಡಿಕೆಗಳನ್ನು ಈಡೇರಿಸುವವರೆಗೆ ಧರಣಿ ಮುಂದುವರಿಯುತ್ತದೆ," ಎಂದು ಸಂಘದ ಅಧ್ಯಕ್ಷ ಅಂಬಣ್ಣ ನಾಯಕ ಬ್ಯಾಗವಾಟ ಹೇಳಿದರು. ನೌಕರರು ಇಂದಿನಿಂದ 8 ಬೇಡಿಕೆಗಳನ್ನು ಈಡೇರಿಸುವವರೆಗೆ ಧರಣಿ ಮುಂದುವ–ರಿಸುವುದಾಗಿ ಘೋಷಿಸಿದರು.

1.15ನೇ ಹಣಕಾಸು ಅನುದಾನದಿಂದಲೇ ವೇತನ ಪಾವತಿ.
2. ಪ್ರತೀ ತಿಂಗಳ 5ರೊಳಗೆ ವೇತನ ಪಾವತಿಸಬೇಕು.
3. ಸೇವಾ ಅವಧಿಯಲ್ಲಿ ಮರಣ ಹೊಂದಿದ ನೌಕರರ ಕುಟುಂಬಕ್ಕೆ ನಿಯಮಾನುಸಾರ ನೇಮಕ.
4.ಸಿಬ್ಬಂದಿಗಳಿಗೆ ಜೀವವಿಮೆ ಸೌಲಭ್ಯ.
5.ನಿವೃತ್ತ ನೌಕರರಿಗೆ ಉಪಧನ.
6.ಬಾಕಿ ಉಳಿದಿರುವ ಹಲವು ತಿಂಗಳ ವೇತನವನ್ನು ತಕ್ಷಣ ಪಾವತಿಸಬೇಕು.
7.ಪ್ರತಿ ನಿತ್ಯ ಧ್ವಜಾರೋಹಣ ಮಾಡುತ್ತಿರುವ ಸಿಬ್ಬಂದಿಗೆ ಪೂರ್ಣ ವೇತನ.
8.ಸಿಬ್ಬಂದಿಗಳ ಮೇಲಿನ ದೂರುಗಳಿಗೆ ಕಾನೂನಾತ್ಮಕ ವಿಚಾರಣೆ ? ವೇತನ ತಡೆದ ಕ್ರಮ ನಿಲ್ಲಿಸಲು ಅಭಿವೃದ್ಧಿ ಅಧಿಕಾರಿಗಳ ಮೇಲೆ ಕ್ರಮ.

ಹೋರಾಟದಲ್ಲಿ ನೌಕರರು, ಸಂಘದ ಸದಸ್ಯರು ಹಾಗೂ ತಾಲೂಕಿನ ವಿವಿಧ ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳು ಭಾಗವಹಿಸಿದರು.

ಈ ಸಂದರ್ಭದಲ್ಲಿ ಕಾರ್ಯಾಧ್ಯಕ್ಷ ಮಹಮ್ಮದ್ ನೀರಮಾನವಿ, ಪ್ರಧಾನ ಕಾರ್ಯದರ್ಶಿ ಸುಭಾನ್ ಚಿಕ್ಕಕೊಟ್ನೆಕಲ್, ಚಂದ್ರಶೇಖರ ಕಪಗಲ್, ಶಿವರಾಜಯ್ಯ ತೋರಣದಿನ್ನಿ, ವೆಂಕೋಬ ನಾಯಕ ಮದ್ಲಾಪೂರು, ಯೇಸುರಾಜು ಕುರ್ಡಿ, ವೆಂಕಟಗಿರಿ ಉಟಕನೂರು, ವಿಜಯ ಕುಮಾರ ಅರೋಲಿ, ಸಿದ್ದಲಿಂಗಯ್ಯ ಸ್ವಾಮಿ, ಶೇಖರಪ್ಪ ತಡಕಲ್, ಹನುಮಂತ ರೆಡ್ಡಿ ಸಾದಾಪೂರ, ಅಮರೇಶ ಜಾನೇಕಲ್, ಹುಚ್ಚಪ್ಪ ಪೊತ್ನಾಳ್ ಸೇರಿದಂತೆ ತಾಲೂಕು ಘಟಕದ ಸದಸ್ಯರು ಹಾಗೂ ವಿವಿಧ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಹಿರಿಯ ಐ ಎ ಎಸ್ (IAS) ಅಧಿಕಾರಿ ಮಹಾಂತೇಶ್ ಬೀಳಗಿ ರಸ್ತೆ ಅಪಘಾತದಿಂದ ನಿಧನ





ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಹಿರಿಯ ಐಎಎಸ್ (IAS) ಅಧಿಕಾರಿ ಮಹಾಂತೇಶ್ ಬೀಳಗಿ (51) ಅವರು ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆಂದು ಇದಿಗ ತಿಳಿದುಬಂದಿದೆ. ವಿಜಯಪುರ ಜಿಲ್ಲೆಯಿಂದ ಕಲಬುರಗಿಯತ್ತ ಕಾರಿನಲ್ಲಿ ಬರುವಾಗ ಜೇವರ್ಗಿ ತಾಲೂಕಿನ ಗೌನಳ್ಳಿ ಬಳಿ ಈ ದುರಂತ ಸಂಭವಿಸಿದೆ.**

ಮಹಾಂತೇಶ್ ಸೇರಿದಂತೆ ಕಾ–ರಿನಲ್ಲಿದ್ದ ಇತರ ಇಬ್ಬರು ಸ್ಥಳದಲ್ಲಿ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ಮಹಾಂತೇಶ್ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಈ ಮೊದಲು ದಾವಣಗೆರೆಯ ಜಿಲ್ಲಾಧಿಕಾ–ರಿಯಾಗಿ ಸೇವೆ ಸಲ್ಲಿಸಿದ್ದ ಅವರು ಪ್ರಸ್ತುತ ಬೆಸ್ಕಾಂನ ಎಂಡಿಯಾಗಿದ್ದರು. ಚಾಲಕನ ನಿಯಂತ್ರಣ ತಪ್ಪಿ ಇನ್ನೊವಾ ಕಾರು ಪಲ್ಟಿಯಾದ ಪರಿಣಾಮ ಈ ಘೋರ ದುರಂತ ಸಂಭವಿಸಿದೆ. ಮಣ್ಣೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೇ ಬೀಳಗಿ ಅವರು ಅಸುನೀಗಿದ್ದಾರೆ.

ಇನ್ನು ಸುದ್ದಿ ತಿಳಿದ ಕೂಡಲೇ ಆಸ್ಪತ್ರೆಗೆ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್, ಪೊಲೀಸ್ ಕಮಿಷನರ್ ಡಾ.ಶರಣಪ್ಪ ಎಸ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ಸೇರಿ ಇತರ ಅಧಿಕಾರಿಗಳು ದೌಡಾಯಿಸಿದ್ದಾರೆ

# ದೇಹಕ್ಕೆ ಅಗತ್ಯವಾದ ಪೋಷಾಕಾಂಶ ದೊರೆಯದೆ ಮೂಳೆಗಳು ದುರ್ಬಲಗೊಳ್ಳುತ್ತಿವೆ: ಡಾ.ಸಂತೋಷ ಎನ್,ಬೆಳವಡಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಕೆ.ಪಿ.ಎಸ್.ವಿ.ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ಕಾಯಚಿಕಿತ್ಸಾ ವಿಭಾಗದ ಪಿ.ಹೆಚ್.ಡಿ.ಸಂಶೋಧನಾರ್ಥಿಗಳಿಂದ ನಡೆದ ಉಚಿತ ಮೂಳೆಗೆ ಸಂಬಂಧಿಸಿದ ಚಿಕಿತ್ಸ ಶಿಬಿರವನ್ನು ಸಂಶೋಧನ ಮಾರ್ಗದರ್ಶಕರಾದ ಗದುಗಿನ ಡಿ.ಜಿ.ಎಂ. ಆಯುರ್ವೇದ ಮೆಡಿಕಲ್ ಕಾಲೇಜ್ ಹಾಗೂ ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಸಂತೋಷ ಎನ್,ಬೆಳವಡಿ ಚಾಲನೆ ನೀಡಿ ಮಾತನಾಡಿ ಮನಸ್ಸು ಮತ್ತು ನಾಲಿಗೆ ನಿಯಂತ್ರಣದಲ್ಲಿಡದೆ ಇದ್ದಲ್ಲಿ ಮಾನವರಲ್ಲಿ ಅನೇಕ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ.**

ಇಂದಿನ ದಿನಗಳಲ್ಲಿ ದೇಹಕ್ಕೆ ಮನಸ್ಸಿಗೆ ಹಿತವಾದ ಆಹಾರವನ್ನು ಸೇವಿಸದೆ ಇರುವುದರಿಂದ ದೇಹಕ್ಕೆ ಅಗತ್ಯವಾದ ಪೋಷಾಕಾಂಶ ದೊರೆಯದೆ ದೇಹದಲ್ಲಿ ವಿಷಾಂಶ ಹೆಚ್ಚಾಗುತ್ತಿದೆ. ಇಂದಿನ ಅಧುನಿಕ ಜೀವನದಲ್ಲಿನ ಒತ್ತಾಡಗಳಿಂದ ,ಶಾರೀ–ರಿಕ ವ್ಯಾಯಮಗಳಿಲ್ಲದೆ ಇರುವುದರಿಂದ ಹೆಚ್ಚಾಗಿ ಮಹಿಳೆಯರಲ್ಲಿಮತ್ತು ಪುರುಷರಲ್ಲಿ ಮೂಳೆಗಳು ದೃಬಲಗೊಳ್ಳುತ್ತಿರುವುದರಿಂದ ಅನೇಕ ಮೂಳೆಗೆ ಸಂಬಂಧಿಸಿದ ಕಾಯಿಲೆಗಳು,ಮೂಳೆ ಸವೇತ ,ಉಂಟಾಗುತ್ತಿವೆ . ನಮ್ಮ ಆಯುರ್ವೇದ ಶಾಸ್ತ್ರದಲ್ಲಿ ಪಂಚಕರ್ಮ ಚಿಕಿತ್ಸೆಯಿಂದ ಹಾಗೂ ಶಾಸ್ತ್ರಿಯವಾಗಿ ತಯಾರಿಸಿದ ಅನೇಕ ಔಷಾಧಿಗಳಿಂದ ಮೂಳೆ ಸಂಬಂಧಿತ ಮಹಿಳೆಯರು ಹಾಗೂ ಪುರುಷರು



ಆಸ್ಥಿಕ್ಷಯ ಸಮಸ್ಯೆ, ಕ್ಯಾಲ್ಸಿಯಂ ಕೊರತೆ, ಮೊಣ–ಕಾಲು, ಬೆನ್ನು, ಕತ್ತು, ಭುಜ ಮತ್ತು ಸೊಂಟ ನೋವು ಮೂಳೆ ದುರ್ಬಲತೆ .ವಯೋಸಹಜ ಮೂಳೆ ಕ್ಷೀಣತೆ, ಮೂಳೆ ಸವೆತ ಸಮಸ್ಯೆಗಳಿಗೆ ಸೂಕ್ತವಾದ ಚಿಕಿತ್ಸೆಯನ್ನು ಪಡೆಯಬಹುದಾಗಿದೆ ಎನ್ನುವ ಕುರಿತು ಕೆ.ಪಿ.ಎಸ್.ವಿ.ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಕಾಯಚಿಕಿತ್ಸಾ ವಿಭಾಗದ ಪಿ.ಹೆಚ್.ಡಿ. ಶೋಧನಾರ್ಥಿಗಳಾದ ಡಾ. ಶರಣಮ್ಮ ರವರು ಅನೇಕ ನೂತನ ಚಿಕಿತ್ಸ ವಿಧಾನಗಳ ಬಗ್ಗೆ ಅಧ್ಯಯನವನ್ನು ನಡೆಸುವುದಕ್ಕೆ ಕೆ.ಪಿ.ಎಸ್.ವಿ.ಎಸ್. ಆಯುರ್ವೇದ ಮೆಡಿಕಲ್ ಕಾಲೇಜ್ ಅವಕಾಶವನ್ನು ಕಲ್ಪಿಸುವ ಮೂಲಕ ಸಾರ್ವಜನಿಕರಿಗಾಗಿ ಉತ್ತಮ ಆರೋಗ್ಯವನ್ನು ಕಲ್ಪಿಸುವುದಕ್ಕೆ ಅವಕಾಶ ನೀಡಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಜೀವನೇಶ್ವರಯ್ಯ ಮಾತನಾಡಿ ಆರೋಗ್ಯವಂತ ಜೀವನಕ್ಕಾಗಿ ಆಯುರ್ವೇದ ಉತ್ತಮ ಮಾರ್ಗವಾಗಿದೆ ಆನಾರೋಗ್ಯಕಾರ ಆಹಾರ ವಿಹಾರದಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ಉತ್ತಮ ಆರೋಗ್ಯ ಪದ್ದತಿಯನ್ನು ಅಳವಡಿಸಿಕೊಳ್ಳುವ ಮೂಲಕ ತಡೆಯಬಹುದು ನಮ್ಮ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ವತಿಯಿಂದ ಇನ್ನೂ ಅನೇಕ ಕಾಯಿಲೆಗಳಿಗೆ ತಜ್ಞ ವೈದ್ಯರಿಂದ ಸಾರ್ವಜನಿಕರಿಗಾಗಿ ಉಚಿತ ಚಿಕಿತ್ಸೆ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಪಿ.ಹೆಚ್.ಡಿ. ಶೋಧನಾರ್ಥಿಗಳಾದ ಡಾ. ಶರಣಮ್ಮರವರು ಶಿಬಿರದಲ್ಲಿ ರೋಗಿಗಳಿಗೆ ಉಚಿತ ಮೂಳೆ ಸಾಂದ್ರತೆ ತಪಾಸಣೆ ಹಾಗೂ ಮೂಳೆಗೆ ಸಂಬಂಧಿಸಿದ ಸಮಸ್ಯೆಗಳ ತಪಾಸಣೆಯನ್ನು ಉಚಿತವಾಗಿ ನಡೆಸಿದರು. ವಾಸು ಹೆಲ್ತ್ ಕೇರೆ ಸಂಸ್ಥೆಯಿಂದ ಉಚಿತವಾಗಿ ಮೂಳೆ ಸಾಂದ್ರತೆ ತಪಾಸಣೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಉಪಾಪ್ರಚಾರ್ಯರಾದ ಡಾ.ಸುಮಂಗಲ ಹೆಚ್.ಎಂ, ಡಾ.ಸುನಿತಾ, ಡಾ,ರಾಜೇಶ್ವರಿ,ಸೇರಿದಂತೆ ಕಾಲೇಜಿನ ವೈದ್ಯ ಉಪನ್ಯಾಸಕರು ಹಾಗೂ ವೈದ್ಯರು, ವೈದ್ಯ ವಿದ್ಯಾರ್ಥಿಗಳು ಭಾಗವಹಿಸಿದರು.

# ಹತ್ತಿ ಖರೀದಿ ನೋಂದಣಿಗೆ ಡಿಸೆಂಬರ್ 31ರವರೆಗೆ ಕಾಲಾವಕಾಶ: ಜಿಲ್ಲಾಧಿಕಾರಿ ನಿತೀಶ್ ಕೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ನವೆಂಬರ್ 25 (ಕ.ವಾ.): ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ಹತ್ತಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ಎಲ್ಲ ರೈತ–ರಿಗೂ ಅನುಕೂಲವಾಗುವ ಹಾಗೆ 2025–26ನೇ ಸಾಲಿನ ಎಂಎಸ್‌ಪಿ ಹತ್ತಿ ಖರೀದಿ ನೋಂದಣಿಗೆ ಡಿಸೆಂಬರ್ 31ರವರೆಗೆ ಕಾಲಾವಕಾಶ ನೀಡಲಾಗಿದ್ದು, ರೈತರು ತರಾತುರಿ ಮಾಡದೇ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ರಾಯಚೂರು ಜಿಲ್ಲೆಯ ರೈತರಲ್ಲಿ ಮನವಿ ಮಾಡಿದರು.**

ನೂತನ ಜಿಲ್ಲಾಧಿಕಾರಿಗಳ ಕಚೇ–ರಿಯ ಸಭಾಂಗಣದಲ್ಲಿ ನವೆಂಬರ್ 24ರ ಸಂಜೆ ವೇಳೆ, ರೈತ ಸಂಘದ ಪ್ರಮುಖರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಈಗಾಗಲೇ ದೇವದುರ್ಗ ತಾಲೂಕಿನಲ್ಲಿ 5 ಕೇಂದ್ರಗಳು, ಮಾನವಿ, ಸಿಂಧನೂರ, ಸಿರವಾರ ತಾಲೂಕುಗಳಲ್ಲಿ ತಲಾ ಒಂದು ಹತ್ತಿ ಖರೀದಿ ಕೇಂದ್ರಗಳನ್ನು ತೆರೆದು ರೈತರಿಗೆ ಅನುಕೂಲ ಕಲ್ಪಿಸಲಾಗಿದೆ. ಭಾರತೀಯ ಹತ್ತಿ ನಿಗಮದಿಂದ ಖರೀದಿ



ಕೇಂದ್ರಗಳು ಈಗಾಗಲೇ ಜಿಲ್ಲೆಯಲ್ಲಿ ಆರಂಭವಾಗಿದ್ದು, ಹತ್ತಿ ಮಾರಾಟ ಮಾಡಲು ಇಚ್ಚಿಸುವ ಪ್ರತಿಯೊಬ್ಬ ರೈತರು ತಮ್ಮ ತಮ್ಮ ಮೊಬೈಲನಿಂದಲೇ ನೋಂದಣಿ ಮಾಡಿಕೊಳ್ಳಬೇಕು.

ರೈತರು, ಕಪಾಸ್ ಕಿಸಾನ್ ಮೊಬೈಲ್ ಅಪ್ಲಿಕೇಶನ್ ಮೂಲಕ ಮೊದಲು ಡಿಜಿಟಲ್ ನೋಂದಣಿ ಮಾಡಿಕೊಳ್ಳಬೇಕು. ಈ ಅಪ್ಲಿಕೇಶನ್ ಗೂಗಲ್ ಪ್ಲೇಸ್ಟೋರನಲ್ಲಿ ಲಭ್ಯವಿದೆ. ಇದನ್ನು ಬಳಸಿ ನೋಂದಣಿ ಮಾಡಿಕೊಂಡು ತಾವು ಬೆಳೆದ ಹತ್ತಿಯನ್ನು ಸುಲಭವಾಗಿ ಮಾರಾಟ ಮಾಡಬಹುದಾಗಿದೆ. ನೋಂದಣಿ ಮಾಡಿದ ಬಳಿಕ ರೈತರು ತಮಗೆ ಹತ್ತಿರದ ಖರೀದಿ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ದಿನಾಂಕ ಮತ್ತು ಸಮಯವನ್ನು ಸಹ ರೈತರೇ ಬುಕ್ ಮಾಡಬೇಕು. ಇದರಿಂದಾಗಿ ಯಾವ ಖರೀದಿ ಕೇಂದ್ರಕ್ಕೆ, ಯಾವ ವೇಳೆಗೆ ಹೋಗಬೇಕು ಎಂಬುದು ತಿಳಿದು ರೈತರಿಗೆ ಅನುಕೂಲವಾಗಲಿದೆ. ಪ್ರತಿ ದಿನ ಕನಿಷ್ಟ 15,000 ಕ್ವಿಂಟಲ್ ನಷ್ಟು ಹತ್ತಿ ಖರೀದಿ ಮಾಡಲು ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಆದರೆ, ಜಿಲ್ಲೆಯಾದ್ಯಂತ ಎಲ್ಲ ರೈತರು ಏಕಕಾಲಕ್ಕೆ ಹತ್ತಿ ಮಾರಾಟಕ್ಕೆ ತರಾತುರಿ ಮಾಡಿದ್ದರಿಂದಾಗಿ ಸ್ಲಾಟ್ ಬುಕ್ಕಿಂಗ್‌ನಲ್ಲಿ ತಾಂತ್ರಿಕ ಅಡಚಣೆ ಕಾಣಿಸಿತ್ತು. ಅದು ಈಗ ಸರಿಯಾಗಿದೆ. ಹಾಗಾಗಿ ರೈತರು ಯಾವುದೇ ಕಾರಣಕ್ಕೆ ಆತಂಕ ಪಡಬಾರದು. ಎಲ್ಲ ರೈತರಿಂದಲೂ ಹತ್ತಿ ಖರೀದಿ ಮಾಡಲಾಗುತ್ತಿದ್ದು, ರೈತರು ಅವಸರ ಮಾಡದೇ ನಿಧಾನಗತಿಯಲ್ಲಿ ಖರೀದಿ ಕೇಂದ್ರಕ್ಕೆ ಆಗಮಿಸಿ ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಭೆಯ ಮೂಲಕ ರೈತರಲ್ಲಿ ಮನವಿ ಮಾಡಿದರು.

ತೊಗರಿ ಕೇಂದ್ರ ತೆರೆಯಲು ಕ್ರಮ: ರಾಯಚೂರು ಜಿಲ್ಲೆಯಲ್ಲಿ ಈಗಾಗಲೇ ರೈತರಿಗೆ ಸ್ಪಂದಿಸಿ ಹತ್ತಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಅದೇ ರೀತಿ ಭತ್ತ ಮತ್ತು ಜೋಳದ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆ ನಡೆಸಲಾಗುತ್ತದೆ.

ರೈತರ ಬೇಡಿಕೆಯಂತೆ ಜಿಲ್ಲೆಯಲ್ಲಿ ತೊಗರಿ ಖರೀದಿ ಕೇಂದ್ರವನ್ನು ತೆರೆಯಲು ಅನುಮತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, 15 ದಿನಗಳೊಳಗೆ ಮಂಜೂರಾತಿ ಸಿಗಬಹುದಾಗಿದೆ. ತೊಗರಿ ಬೆಳೆಗಾರರು ಸಹಕರಿಸಬೇಕು ಎಂದು ಇದೆ ವೇಳೆ ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಇದುವರೆಗೆ 22,000 ರೈತರಿಂದ ನೋಂದಣಿ: ರಾಯಚೂರು ಜಿಲ್ಲೆಯಲ್ಲಿ ಇದುವರೆಗೆ 22,000 ರೈತರು ನೋಂದಣಿ ಮಾಡಿಸಿದ್ದಾರೆ. ಈ ಪೈಕಿ ಕೃಷಿ ಇಲಾಖೆಯು 13,747 ಜನ ರೈತರಿಗೆ ಅನುಮೋದನೆ ನೀಡಿದೆ. ಇನ್ನುಳಿದ ರೈತರಿಗೆ ಅನುಮೋದನೆ ನೀಡುವ ಪ್ರಕ್ರಿಯೆ ನಡೆಯುತ್ತಿದೆ.

ಈಗಾಗಲೇ 35 ಕ್ವಿಂಟಲ್‌ನಷ್ಟು ಹತ್ತಿ ಖರೀದಿ ಮಾಡಲಾಗಿದೆ. ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಾಲ್ ಹತ್ತಿ ಖರೀದಿಗೆ ರೂ. 8,110 ನಿಗದಿ ಮಾಡಿದೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಉಪ ನಿರ್ದೇಶಕರಾದ ಬಿ ಕೃಷ್ಣ ಅವರು ಸಭೆಗೆ ಮಾಹಿತಿ ನೀಡಿದರು. ಸಭೆಯಲ್ಲಿ ರೈತ ಸಂಘದ ಚಾಮರಾಜ ಪಾಟೀಲ ಸೇರಿದಂತೆ ಇನ್ನೀತರ ರೈತ ಮುಖಂಡರು, ರೈತರು, ಜಂಟಿ ಕೃಷಿ ನಿರ್ದೇಶಕರಾದ ಚವ್ಹಾಣ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101